ಇದ್ದೇವೆ ಅದನ್ನು ಅಷ್ಟಾಗಿ ಕಾರ್ಯರೂಪದಲ್ಲಿ ತರುತ್ತಾ ಇಲ್ಲ. ನಾನು ಹೈದರಾಬಾದ್ ಪ್ರದೇಶದಿಂದ ಬಂದವನು. ಅಲ್ಲಿ 1952 ರಿಂದ ಈ ರೀತಿ ಭೂ ಸುಧಾರಣೆ ಮಾಡಬೇಕೆಂದು ಹೇಳುತ್ತಾ ಬಂದು 1955 ರಲ್ಲಿ ಒಂದು ತೀರ್ಮಾನ ಮಾಡಲಿಕ್ಕೆ ಸಮರ್ಥರಾದೆವು. ಇವತ್ತಿನ ದಿವಸ ಭೂಮಾಲೀಕರು ಗೇಣೀದಾರರಿಗೆ ಯಾವುದೂ ತಿಳಿಯದಂತಾಗಿದೆ. ನನ್ನ ಹತ್ತಿರ ಭೂಮಿ ಎಷ್ಟಿರಬೇಕು ಎಂದು ಭೂಮಾಲೀಕರಿಗೆ ತಿಳಿಯದು. ಗೇಣೀದಾರನಿಗೆ, ನನ್ನ ವಶದಲ್ಲಿದ್ದ ಭೂಮಿ ಯಾವಾಗಲೂ ನನ್ನ ಹತ್ತಿರ ಇರುತ್ತದೆಯೋ ಇಲ್ಲವೋ, ಅದರ ಸ್ವಾಮಿತ್ವ ಸಿಕ್ಕುತ್ತದೆಯೋ ಇಲ್ಲವೋ ಎಂದು ಅವನಿಗೆ ತಿಳಿಯದು. ಇದರ ಪರಿಣಾಮ ಪ್ರೊಡಕ್ಷನ್ ಮೇಲೆ ಸಾಕಾದಷ್ಟು ಆಗಿದೆ. ಪ್ರೋಗ್ರೆಸೀವ್ ಲೆಜಿಸ್ಲೇಷನ್ ಮಾಡುವುದರಿಂದ ಭೂಮಿಯಲ್ಲಿ ಹೆಚ್ಚು ಉತ್ಪನ್ನವಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಅದು ಅನಿಶ್ಚಿತ ಪರಿಸ್ಥಿತಿ ಇದೆ. ಇದರ ಬಗ್ಗೆ ಸಾಕಷ್ಟು ಕಾಲಾವಧಿಯನ್ನು ಈಗಾಗಲೇ ಕಳೆದಿದ್ದೇವೆ. ಇನ್ನು ಮುಂದೆ ಹೆಚ್ಚು ಸಮಯ ತೆಗೆದುಕೊಳ್ಳದೆ ಈ ಮಸೂದೆಯನ್ನು ಪಾಸ್‌ಮಾಡಿ, ಒಂದು ಆಕ್ಟಿನ ಸ್ವರೂಪಕ್ಕೆ ತರಬೇಕೆಂದು ಮಾನ್ಯ ಕಂದಾಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ರೀತಿ ಭೂಸುಧಾರಣೆ ಮಸೂದೆಯನ್ನು ಪಾಸ್‌ಮಾಡುವುದರಿಂದ ಲಕ್ಷಾವಧಿ ಎಕರೆ ಭೂಮಿ ಸರ್‌ಪ್ಲಸ್ ಉಳಿಯುತ್ತದೆ, ಬಡ ಜನರಿಗೆ ಆ ಭೂಮಿಯನ್ನು ಕೊಡಬಹುದು ಎಂದು ತಿಳಿದುಕೊಂಡಿದ್ದರೆ ಅದು ತಪ್ಪು ಎಂದೆನಿಸುತ್ತದೆ. ಮಂತ್ರಿಗಳಿಗೂ ತಿಳಿದಿದೆ. ಯಾವುದಾದರೂ ಒಂದು ಬಿಲ್ ಮಾಡುವುದಕ್ಕೆ ಮುಂಚೆ ಅನೇಕ ವರ್ಷಗಳಿಗಿಂತಲೂ ಮೊದಲೇ ಪ್ರಾಪಗ್ಯಾಂಡಾ ಆರಂಭ ಮಾಡುತ್ತೇವೆ. ಈಗ ಭೂಮಾಲೀಕರೆಲ್ಲರಿಗೂ ಅವರಲ್ಲಿ ಎಷ್ಟು ಭೂಮಿ ಉಳಿಯುತ್ತದೆ, ಎಷ್ಟು ಭೂಮಿ ಉಳಿಯುವುದಿಲ್ಲ ಎಂಬುದು ಸಾಮಾನ್ಯವಾಗಿ ಗೊತ್ತಿದೆ. ಹೀಗಾಗಿ ಅವರು ಯಾವುದೋ ರೀತಿಯಿಂದ ವಿಂಗಡಿಸಿ ಒಂದಷ್ಟು ಜಮೀನೂ ಸರ್ಕಾರದವರಿಗೆ ಸಿಕ್ಕದಂತೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾರೆ. ಈ ರೀತಿ ಎಲ್ಲಾ ಮಾಡಿಕೊಂಡು ಹೋದಮೇಲೂ ಎರಡು ಲಕ್ಷದಿಂದ ನಾಲ್ಕು ಲಕ್ಷ ಎಕರೆವರೆಗೂ ಸಿಕ್ಕುತ್ತದೆ ಎಂದು ಆಶೆ ಮಾಡುತ್ತಾರೆ. ಅಷ್ಟು ಸಿಕ್ಕುತ್ತದೆಯೇ ಎಂದು ಸಂಶಯ ಬರುತ್ತದೆ. ಸಿಕ್ಕಿದರೆ ಒಳ್ಳೆಯದು. ನಾನು ಮೊದಲೇ ಹೇಳಿದ ಹಾಗೆ, ಮೂಲ ಭೂತ ಪ್ರಶ್ನೆ ತೆಗೆದುಕೊಂಡು ಚರ್ಚೆಮಾಡುವುದಿಲ್ಲ. ನಾನು ಹೈದರಾಬಾದ್ ಭಾಗದಿಂದ ಬಂದಂಥವನು; ಆದ್ದರಿಂದ ಈ ಬಿಲ್ ಪಾಸ್‌ಮಾಡಿ, ಆಕ್ಟ್ ಮಾಡುವುದರಿಂದ ಹೈದರಾಬಾದ್ ಭಾಗದ ಜನತೆಯಮೇಲೆ ಯಾವ ಪರಿಣಾಮ ವುಂಟಾಗುತ್ತದೆ ಎಂಬ ಒಂದು ದೃಷ್ಟಿ ಇಟ್ಟುಕೊಂಡು ಅದರ ಬಗ್ಗೆ ಕೆಲವು ಮಾತುಗಳನ್ನು ಈ ಸಭೆಯ ಮುಂದೆ ಇಡಬೇಕೆಂದು ವಿಚಾರ ಮಾಡುತ್ತಾ ಇದೇನೆ. ಇದು ಪ್ರೋಗ್ರೆಸೀವ್ ಲೆಜಿಸ್ಲೇಷನ್ ಎಂದು ಆಗಲೇ ಹೇಳಿದೆ. ಈ ಬಿಲ್ಲು ಹಳೆಯ ಮೈಸೂರು ಮತ್ತು ಮದರಾಸು ಭಾಗಕ್ಕೆ ಅನ್ವಯವಾಗುವಂತೆಯೇ ಬೊಂಬಾಯಿ, ಹೈದರಾಬಾದು ಭಾಗಕ್ಕೂ ಅನ್ವಯವಾಗುತ್ತದೆ. ಒಂದು ಸಂತೋಷದ ಸಂಗತಿ ಎಂದರೆ-ಬೊಂಬಾಯಿನ ವಿಷಯ ನನಗೆ ಗೊತ್ತಿಲ್ಲ-ಹೈದರಾಬಾದಿಗೆ ಸಂಬಂಧಪಟ್ಟಂತೆ ಹೇಳಬೇಕಾದರೆ ಈ ವಿಷಯದಲ್ಲಿ ಒಂದು ಹೆಜ್ಜೆ ಮುಂದೆ ಇಡದೇ ಇದ್ದರೂ ಪರವಾಗಿಲ್ಲ, ಒಂದು ಹೆಜ್ಜೆ ಹಿಂದೆ ಇಟ್ಟಿಲ್ಲ ಎಂದು ಸಂತೋಷವಾಗುತ್ತದೆ. ಏಕೆಂದರೆ 3,600 ರೂಪಾಯಿ ಫ್ಯಾಮಿಲಿ ಹೋಲ್ಡಿಂಗಿಗೆ ಇದೆ. ಪರಿಸ್ಥಿತಿ ಬದಲಾವಣೆ ಆದಹಾಗೆ, ಒಂದು ಯೂನಿಫಾರಂ ಲೆಜಿಸ್ಲೇಷನ್ ಬಂದಾಗಲೂ ಕೂಡ ಕೆಟ್ಟ ಪರಿಣಾಮವಾಗದಂತೆ ನೋಡಿಕೊಂಡು ಆ ಭಾಗದ ರೈತರಿಗೆ ಒಂದು ದೊಡ್ಡ ಉಪಕಾರ ಮಾಡಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ಇದರ ಸಲುವಾಗಿ ಕೆಲವು ವಿಷಯಗಳನ್ನು ಮಾನ್ಯ ಮಂತ್ರಿಗಳು ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಈಗ ಬಿಲ್ಲಿನಲ್ಲಿ 'protected tenant' ಎಂದರೆ ಯಾರು ಎನ್ನುವುದಕ್ಕೆ definition ಕೊಟ್ಟಿದ್ದಾರೆ. Protected tenant ಯಾರು ಎಂಬುದಕ್ಕೆ definition ಇರುವುದರಿಂದ ಯಾರು protected tenant ಅಲ್ಲ ಎನ್ನುವುದು ಗೊತ್ತಾಗುತ್ತದೆ. ಭೂಮಾಲೀಕರಿಗೆ ಒಂದು objection ತೆಗೆಯುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ. ಭೂಮಾಲೀಕನು ಟ್ರಿಬ್ಯೂನಲ್ ಮುಂದೆ ಹೋಗಿ ಇವನು ಟೆನೆಂಟ್ ಅಲ್ಲ ಎಂದು ಹೇಳಿಕೊಳ್ಳಬಹುದು. ಈ ರೀತಿ ಹೇಳುವುದಕ್ಕೆ ಒಂದು ಕಾಲಾವಧಿಯ ಮಿತಿ ನಿಶ್ಚಿತಮಾಡಿಲ್ಲ. ಇದರಿಂದ litigation ಜಾಸ್ತಿಯಾಗುವುದಕ್ಕೆ ಅನುಕೂಲವಾಗುತ್ತದೆಯೇ ಹೊರತು ಈ ಸಮಸ್ಯೆಯನ್ನು ಬಗೆಹರಿಸಿದಂತಾಗುವುದಿಲ್ಲ. ಇಂಥ ರೈತನು 12 ವರ್ಷ ಸಾಗುವಳಿ ಮಾಡಿದವನು ಇರಬೇಕೆಂದು definition ನಲ್ಲಿದೆ. ಅದು ಈ ರೀ ಇದೆ :

> " 'Protected tenant' means a person who has been in continuous possession of any land and has been cultivating such land personally on payment of rent to the landlord for a period of not less than twelve years prior to the appointed day."

ಇದು 'protected tenant' ನ definition ಆಗಿದೆ. Appointed day ಗಿಂತ ಮುಂಚಿತವಾಗಿ 12 ವರ್ಷ ಅವದಿ ಇಟ್ಟಿದ್ದಾರೆ. ಭೂಮಿಯು ರೈತನ ವಶದಲ್ಲಿ 12 ವರ್ಷ ಇರುತ್ತದೆಂದು declare ಮಾಡಬೇಕು. ಟ್ರಿಬ್ಯೂನಲ್ಲಿನವರು ಇದಕ್ಕಾಗಿ documents produce ಮಾಡಿ ಎಂದು ಕೇಳಬಹುದು. ಇದರ ಪರಿಣಾಮವು ಏನಾಗುತ್ತದೆ ಎಂದರೆ ಹೈದರಾಬಾದು ಟೆನನ್ಸಿ ಆಕ್ಟ್ ಪ್ರಕಾರ protected tenant ಎಂದು ಪರಿಗಣಿಸಲ್ಪಟ್ಟವನ ಮೇಲೆ ಇದರ ಪರಿಣಾಮವಾಗುತ್ತದೆಂದು ಕಂಡುಬರುತ್ತದೆ. ಹೈದರಾಬಾದು ಟೆನನ್ಸಿ ಆಕ್ಟಿನ 34ನೆಯ ಸೆಕ್ಷನ್ ನೋಡಿದರೆ ಇದು ತಿಳಿದುಬರುತ್ತದೆ. ಅದರಲ್ಲಿ ಏನಿದೆ ಎಂದರೆ, 1342ರಿಂದ 1352ರವರೆಗೆ ಫಸಲಿ ವರ್ಷದಿಂದ ಹತ್ತು ವರ್ಷ ಅವಧಿಯಲ್ಲಿ ಮತ್ತು ಆರು ವರ್ಷ ಅವಧಿಯಲ್ಲಿ continuous ಆಗಿ ಭೂಮಿ ರೈತನ ವಶದಲ್ಲಿದ್ದರೆ, for a period not less than six years commencing not earlier than 1353, ಎಂದರೆ ಆರುವರ್ಷ ಇದ್ದರೆ, ಅಂಥವನು protected tenant ಎಂದು ತಿಳಿಯಲ್ಪಡುತ್ತಾನೆ. ಇನ್ನು section 36 ರಲ್ಲಿ ಏನು ಹೇಳಿದ್ದಾರೆ ಎಂದರೆ, 10th June 1950 ಯಿಂದ ಯಾವದೇ ಟೆನೆಂಟಿನ ವಶದಲ್ಲಿ ಭೂಮಿ ಇದ್ದರೆ ಒಂದು ವರ್ಷದೊಳಗಾಗಿ ಭೂಮಾಲೀಕನು objection petition ಹಾಕದೆ ಇದ್ದರೆ automatically ಅಂಥವನು protected tenant ಆಗುತ್ತಾನೆ. ಇದು 1953ನೆಯ ವರ್ಷದಲ್ಲಿ ಅಮೆಂಡ್‌ಮೆಂಟ್ ಆಗಿದೆ. ಯಾರ ಯಾರ ಭೂಮಿ ಯಾರ ಯಾರ ವಶದಲ್ಲಿದೆ, ಯಾರು ಯಾರು protected

(ಶ್ರೀ ವೀರೇಂದ್ರ ಪಾಟೀಲ್)

tenant ಎಂಬುದನ್ನು declare ಮಾಡಿದೆ. ಇದರ ಪರಿಣಾಮ ಏನಾಗಿದೆ ಎಂದರೆ ನೂರಕ್ಕೆ 99ರಷ್ಟು ರೈತರು protected tenants ಆಗಿದ್ದಾರೆ. ಇದಲ್ಲದೆ ಈಗಾಗಲೇ record of rights ತಯಾರು ಮಾಡಿ tenants register ಕೂಡ ತಯಾರು ಆಗಿದೆ. ಆದ್ದರಿಂದ protected tenant ಯಾರ ಅಲ್ಲ ಎಂಬುದು ನಿರ್ಧಾರವಾಗಿದೆ. ಈ ಆಕ್ಟು ಜಾರಿಗೆ ಬಂದು protected tenant ಗೆ ಈಗಾಗಲೇ ಒಂದು security ಕಾರ್ಯರೂಪದಲ್ಲಿ ಬಂದಿದೆ. ಇಂಥ protected tenants ಗಳಿಗೆ security ಕೊಡಬೇಕಾಗುತ್ತದೆ. 12 ವರ್ಷ ಭೂಮಿ ರೈತನ ವಶದಲ್ಲಿದ್ದರೆ ಮಾತ್ರ ಅವನು protected tenant ಎಂದು ಜಾರಿ ಮಾಡುವುದಾದರೆ ಅನುಕೂಲವಾಗುವುದಿಲ್ಲ. Central Reforms Committee ಯವರು ಒಂದು ಸೂಚನೆ ಮಾಡಿದ್ದೇನೆಂದರೆ, tenants existing rights ಏನು ಇರುತ್ತವೆಯೋ ಅದರ ಮೇಲೆ ಯಾವ ದುಷ್ಪರಿಣಾಮವೂ ಆಗದ ಹಾಗೆ ನೋಡಿಕೊಳ್ಳಬೇಕೆಂದು ಇದೆ. ಆದ್ದರಿಂದ ಈ ಮಸೂದೆಯಲ್ಲಿ ಈಬಗ್ಗೆ ಯಾವ saving clause ಅನ್ನೊ ಇಟ್ಟಿಲ್ಲ. ಯಾರು ಯಾರು protected tenant ಎನ್ನುವುದನ್ನು ನಿರ್ಧಾರಮಾಡಿ, ಈಗಾಗಲೇ tenant registers ತಯಾರುಮಾಡಿ ನಮ್ಮ ಹೈದರಾಬಾದು ಪ್ರದೇಶದಲ್ಲಿ tenancy forms ಕೂಡ ಹಂಚಿದ್ದಾರೆ. ಇದೆಲ್ಲಾ ಈ ಹಳೆಯ ಮೈಸೂರು ಭಾಗದ ಜನರಿಗೆ ಹೊಸದಾಗಿ ಕಾಣಿಸಬಹುದು. ಆದ್ದರಿಂದ ಹೈದರಾಬಾದು ಪ್ರದೇಶದಲ್ಲಿಯ protected tenantsಗಳಿಗೆ ಇರುವ ಹಕ್ಕುಗಳನ್ನು ರಕ್ಷಣೆ ಮಾಡುವ ಜವಾಬ್ದಾರಿಯನ್ನು ಸರಕಾರದವರು ವಹಿಸಿದ್ದಾರೆ. ಆದಕಾರಣ 12 ವರ್ಷ ಸತತ ಭೂಮಿಯು ರೈತನ ವಶದಲ್ಲಿ ಇರಬೇಕೆಂಬ ನಿಯಮವನ್ನು ಈ ಮಸೂದೆಯ ಪ್ರಕಾರ ಜಾರಿಗೆ ಕೊಡುವುದರಿಂದ ನಮ್ಮ ಹೈದರಾಬಾದು ಪ್ರದೇಶದಲ್ಲಿ ಇದರಿಂದ confusion ಉಂಟಾಗುತ್ತದೆ. ಹೈದರಾಬಾದು ಆಕ್ಟ್ ಪ್ರಕಾರ ಈಗಾಗಲೇ ಯಾರು ಯಾರು protected tenant ಎಂದು ನಿರ್ಧಾರವಾಗಿದೆಯೋ ಅಂಥವರಿಗೆ ಸಂರಕ್ಷಿತ ಗೇಣಿದಾರು ಎಂದು ಸಂರಕ್ಷಣೆ ಕೊಟ್ಟು, ಅವರ ಮೇಲೆ ಯಾವ ಪರಿಣಾಮವಾಗುವುದಿಲ್ಲ ಎನ್ನುವುದನ್ನು ಈ ಹೊಸ ಮಸೂದೆಯಲ್ಲಿ ಸೇರಿಸಬೇಕಾದುದು ಅಗತ್ಯ. ಏಕೆಂದರೆ ಈ ಅಂಶವನ್ನು ಮಸೂದೆಯಲ್ಲಿ ಸೇರಿಸಿಲ್ಲ. ಈ ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಈ ಮಸೂದೆಯಲ್ಲಿ protected tenant, ಮತ್ತು ordinary tenant ಎಂಬುದಕ್ಕೆ definition ಇದೆ. ಆದರೆ protected tenant ಗೆ ಏನೇನು protection ಕೊಡಲಾಗುವುದು ಎನ್ನುವುದು ಮಾತ್ರ ಅರ್ಥವಾಗುವುದಿಲ್ಲ. ಈ ಮಸೂದೆಯ ಪ್ರಕಾರ ಇದರಲ್ಲಿರುವ ಹಾಗೆ ಜಾರಿಮಾಡುವುದಾದರೆ ಗೊತ್ತು ಮಾಡಲ್ಪಡುವ ತಾರೀಖಿಗೆ ಮುಂಚಿತವಾಗಿ ಭೂಮಿಯು ಯಾವ ಗೇಣಿದಾರನ ವಶದಲ್ಲಿ ಇರುವುದೋ ಅಂಥವರೆಲ್ಲರೂ tenants ಆಗುತ್ತಾರೆ. ಹೈದರಾಬಾದು ಮತ್ತು ಬೊಂಬಾಯಿ ಕರ್ನಾಟಕ ಪ್ರದೇಶದಲ್ಲಿರುವ tenants ಅವರು protected tenants ಆಗುತ್ತಾರೆ. ಹಕ್ಕು ಬಾಧ್ಯತೆಗಳಲ್ಲಿ ಯಾರಿಗೂ ಹೆಚ್ಚು ಕಡಮೆಯಾಗುವುದು ಕಂಡುಬರುವುದಿಲ್ಲ. ಅದು ಹೇಗೆಂದರೆ ಭೂಮಿಯನ್ನು ಬಿಡಿಸಿಕೊಳ್ಳುವ ಸಂದರ್ಭಬಂದರೆ ರೈತನಿಂದ ಭೂಮಿಯನ್ನು ಬಿಡಿಸಿಕೊಳ್ಳಬಹುದು. ಪರಿಹಾರ ಕೊಡುವ ಪ್ರಶ್ನೆಯೂ ಇದರ ಜೊತೆಗೆ ಬರುತ್ತದೆ. Protected tenantsಗೆ ಭೂಮಿಯ ಸ್ವಾಮಿತ್ವ ದೊರೆಯುತ್ತದೆ. ಗೇಣಿಯ 15 ಪಟ್ಟು ಪರಿಹಾರ ಕೊಡಬೇಕೆಂದು ಇದೆ. ಇದರಿಂದ ಏನಾಗುತ್ತದೆ ಎಂದರೆ ನಿನ್ನೆ ಬಂದಂಥ ರೈತನಿಗೂ ಹದಿನೈದು ಪಟ್ಟು ಪರಿಹಾರ ಕೊಡಬೇಕು, 15 ವರ್ಷಗಳಿಂದ ಭೂಮಿಯನ್ನು ವಶದಲ್ಲಿಟ್ಟುಕೊಂಡ ಸಾಗುವಳಿ ಮಾಡುವವನಿಗೂ ಅಷ್ಟೇ ಅಂದರೆ ಹದಿನೈದು ಪಟ್ಟು ಪರಿಹಾರ ದೊರೆಯಬೇಕು ಎಂದಾಗುವುದು, ಅವರಿಗೂ ಇವರಿಗೂ ಒಂದೇ ರೀತಿಯ ಪರಿಹಾರ ಕೊಡಬೇಕು ಎಂದು ಹೇಳಿದ ಹಾಗೆ ಆಗುವುದು. ಹಾಗಾದರೆ protected tenant ಎಂದು ಏತಕ್ಕೆ ಅನ್ನಬೇಕು ? ಆದುದರಿಂದ protected tenant ಗಳ ಹಕ್ಕನ್ನು ಯಾವ ರೀತಿ protect ಮಾಡುತ್ತಾರೆ ಎನ್ನುವುದು ನನಗಂತೂ ತಿಳಿಯುವುದಿಲ್ಲ. ಈ ರೀತಿ ಭೇದಭಾವ ಮಾಡದೇ ಇರುವುದು ಸರಿಯಲ್ಲ. Protected tenants ಗಳಿಗೆ ಅನುಕೂಲಮಾಡಿ ಕೊಡಬೇಕು. ಹೆಚ್ಚು ಪರಿಹಾರ ಕೊಡಿಸಬಹುದು. ಹೈದರಾಬಾದು ಪ್ರದೇಶದಲ್ಲಿ protected tenant ಯಾರು ಎನ್ನುವುದಕ್ಕೆ ನಿರ್ಧಾರವಾಗಿದೆ. Protected tenant ಇರುವಾಗ್ಗೆ ಪರಿಹಾರ ಕೊಡುವುದನ್ನು ಕಡಿಮೆಮಾಡಬೇಕಾಗಿತ್ತು. ಆದುದರಿಂದ ಈ ಎಲ್ಲ ಅಂಶಗಳನ್ನೂ ಕೂಲಂಕಷವಾಗಿ ವಿಚಾರಮಾಡಬೇಕು ಎಂದು ನಾನು ಬೇಡಿಕೊಳ್ಳುತ್ತೇನೆ.

Fixation of family holding ವಿಚಾರದಲ್ಲಿ ಹೈದರಾಬಾದು ಆಕ್ಟ್ ಪ್ರಕಾರ 800 ರೂಪಾಯಿ net income ಇದ್ದರೆ ಅದನ್ನು family holding ಎಂದು ಪರಿಗಣಿಸಲಾಗಿದೆ. ಈ ಮಸೂದೆಯ ಪ್ರಕಾರ family holding 1,200 ರೂಪಾಯಿ ಎಂದು ಮಾಡಿದ್ದಾರೆ. ಇದು ಹೈದರಾಬಾದಿನಲ್ಲಿರತಕ್ಕ family holding ನ ಒಂದೂವರೆ ಪಟ್ಟು ಆಯಿತು. ಇದರ ಪರಿಣಾಮ ಏನಾಗುತ್ತದೆ ಎನ್ನುವುದನ್ನು ವಿಚಾರ ಮಾಡಬೇಕಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಂಟುನೂರು ರೂಪಾಯಿ net income ಗೆ ಒಂದು family holding ಎಂದು ಇರುವುದಾದರೆ ಅದು ಎಷ್ಟು ಎಕರೆ ಭೂಮಿಯಾಗುತ್ತದೆ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅದರ ಪರಿಣಾಮ ರೈತರ ಮೇಲೆ ಏನಾಗುತ್ತದೆ ಎನ್ನುವುದನ್ನು ನಾನು ಈಗ ಹೇಳುತ್ತೇನೆ. ಎಂಟುನೂರು ರೂಪಾಯಿ net income ಗೆ ಒಂದು family holding ಎಂದು ಹೈದರಾಬಾದು ಪ್ರದೇಶದಲ್ಲಿ ಇದ್ದರೆ, ಈಗ ಈ ಮಸೂದೆಯ ಪ್ರಕಾರ 1,200 ರೂಪಾಯಿಗಳಿಗೆ ಒಂದು family holding ಎಂದು ಮಾಡಿದ್ದಾರೆ. ನಮ್ಮ ಹೈದರಾಬಾದು ಪ್ರದೇಶದಲ್ಲಿ wet and dry land ಬಗ್ಗೆ cost of production 50 per cent ಎಂದು ಮಾಡಿದ್ದಾರೆ ; 50 per cent of the gross income ಎಂದು ನಿರ್ಣಯ ಮಾಡಿದ್ದಾರೆ. ಇಲ್ಲಿ ಏನು ಮಾಡಿದ್ದಾರೆ ಎಂದರೆ wet land ಆಗಿದ್ದರೆ 50 per cent ಎಂದು ಇಟ್ಟಿದ್ದಾರೆ. Dry land ಆಗಿದ್ದರೆ one-third of the gross income ಎಂದು ಇಟ್ಟಿದ್ದಾರೆ. ಈಗ 800 ರೂಪಾಯಿ family holding ಹೋಗಿ ಅದು 1,200 ರೂಪಾಯಿ ಆಗುತ್ತದೆ. ಇದಲ್ಲದೆ net income 50 per cent ಹೋಗಿ ಅದು one-third ಆಗುತ್ತದೆ. ಇದರ ಪರಿಣಾಮ ಏನಾಗುತ್ತದೆ ಎಂದರೆ ಈಗಾಗಲೇ ಹೈದರಾಬಾದು ಪ್ರದೇಶದಲ್ಲಿ Land Commission

ಅವರು ಹೋಗಿ, local area ಎನ್ನುವುದನ್ನು fix ಮಾಡಿ, net income yield ಎಷ್ಟು ಎನ್ನುವುದನ್ನು ನಿರ್ಧಾರಮಾಡಿದ್ದಾರೆ. ಅಲ್ಲಿ ಎಲ್ಲಾ ಮುಗಿದು ಹೋಗಿದೆ. 36 ಎಕರೆ dry land, basic holding 12 ಎಕರೆಗಳು, ಎಂದು calculation ಹಿಡಿದಿದ್ದಾರೆ. ಈಗ one-third cost of production ಹಿಡಿಯುವುದರಿಂದ ಇನ್ನು ಒಂದೆರಡು ಎಕರೆ ಹೆಚ್ಚಾಗಬಹುದು. ಆದ್ದರಿಂದ 12 ಎಕರೆ basic holding ಇರ ವುದು ಅದು 19 ಅಥವಾ 20 ಎಕರೆ ಆಗುತ್ತದೆ. ಈ ಹೊಸ ಬಿಲ್ಲಿನ ಪ್ರಕಾರ 12 ಎಕರೆ ಆಗುವುದರಿಂದ ಈಗ ಇರತಕ್ಕ 18 ಎಕರೆ ಭೂಮಿಯಲ್ಲಿ 12 ಎಕರೆಗಿಂತ ಹೆಚ್ಚಾಗಿರುವುದನ್ನು ರೈತನು ಬಿಡಿಸಿಕೊಂಡು ಹೋಗುತ್ತಾನೆ. ಅದನ್ನು ಕೇಳುವವರು ಯಾರೂ ಇಲ್ಲ. ಆದರೆ ಹೈದರಾಬಾದ್ ಆಕ್ಟ್ ಪ್ರಕಾರ ಬಿಡಿಸಿಕೊಳ್ಳುವ ಅಧಿಕಾರವಿಲ್ಲ. ಹನ್ನೆರಡು ಎಕರೆ ಮೇಲ್ಪಟ್ಟಿದ್ದವನು ಮಾತ್ರ ಅರ್ಧ ಬಿಟ್ಟು ಹೋಗಬೇಕಾಗುತ್ತದೆ. ಇದರ ಪರಿಣಾಮವೇನಾಗುತ್ತದೆಂದು ತಮ್ಮ ಮುಂದೆ ಹೇಳುತ್ತಿದ್ದೇನೆ. ಅದರ ಸಲುವಾಗಿ family holding ಈಗಾಗಲೇ ಮಾಡಿರುವುದನ್ನು disturb ಮಾಡುತ್ತೀರಾ ಎನ್ನುವುದರ ಬಗ್ಗೆ ಸ್ಪಷ್ಟವಾಗಿಲ್ಲ. ಇವೊತ್ತು family holding ಎಂದು ಗೊತ್ತು ಮಾಡುವುದಾದರೆ ರೈತರಿಂದ ಜಮೀನನ್ನು ತೆಗೆದುಕೊಳ್ಳಲು ಅವಕಾಶವಾಗಿ ಸಣ್ಣ ಸಣ್ಣ ಹಿಡುವಳಿದಾರರು ಭೂಮಿಯಿಂದ ಹೊರಗೆ ಹಾಕಲ್ಪಡುತ್ತಾರೆ. ಅದರ ಸಲುವಾಗಿ ಈ ಬಗ್ಗೆ ಕೂಡ ನಮ್ಮ ಏರಿಯಾದಲ್ಲಿ ಏನು ಪರಿಣಾಮವಾಗುತ್ತದೆಂದು ತಮ್ಮ ಮುಂದೆ ತಂದಿದ್ದೇನೆ.

Sri KADIDAL MANJAPPA.—Suppose we make a provision to the effect that even in the case of small holders if they want to resume for personal cultivation they should leave at least half the extent with the tenants. Will that be all right ?

Sri VEERENDRA PATIL.—That is already there in the Bill. But a small holder having less than a basic holding can resume the whole land.

Sri KADIDAL MANJAPPA.—In that case we can say that as mall holder, if he wants to resume for personal cultivation, can resume only half the extent.

Sri M. R. PATIL.—May I draw the attention of the Hon'ble Member to the proviso to clause 18 which says :

> "Provided also that where the landlord has, at any time before the appointed day, once filed a statement of reservation, under sub-section (1) of section 44 of the Hyderabad Tenancy and Agricultural Lands Act, 1950, as in force in the Hyderabad Area, his right to terminate tenancy shall be exercisable only in respect of the lands specified in the statement."

Sri VEERENDRA PATIL.—That applies only to those who have exercised the right of resumption. Suppose a landowner has not exercised the right of resumption, in that case he will be benefited by this Bill.

ಈಗ ಒಂದು ಪ್ರಶ್ನೆ ಏನೆಂದರೆ, family holding ನಿಗದಿ ಮಾಡಬೇಕಾದರೆ ಅನೇಕ ಮಾನ್ಯಸದಸ್ಯರು ಏಕರೇಜ್ ಮೇಲೆ ನಿಗದಿ ಮಾಡಬೇಕು ಎಂದು ಹೇಳಿದರು. ವರಮಾನದ ಮೇಲೆಯೇ ನಿಗದಿ ಮಾಡಬೇಕು ಎನ್ನುವ ಉದ್ದೇಶ ಯಾರಿಗೂ ಇಲ್ಲ. ಈಗ ವರಮಾನದ ಮೇಲೆ ಎಂದು ಹಾಕಿದ್ದರೂ ಮುಂದೆ ಏಕರೇಜ್ ಮೇಲೆಯೇ ಆಗುತ್ತದೆ. ಅದಕ್ಕೋಸ್ಕರವಾಗಿಯೇ ಲ್ಯಾಂಡ್ ಕಮಿಷನ್ ಮಾಡಿದ್ದೇವೆ. ಈಗ ದೊಡ್ಡ ರಾಜ್ಯವಾಗಿದೆ. ಎಲ್ಲೆಲ್ಲಿ ಯಾವ ಯಾವ ಭಾಗದಲ್ಲಿ ಯಾವ ಯಾವ ರೀತಿಯ ಭೂಮಿ ಇದೆ ಎನ್ನುವ ಕಲ್ಪನೆ ಯಾರಿಗೂ ಇಲ್ಲ. ಹೈದರಾಬಾದ್ ಏರಿಯಾದ ಬಗ್ಗೆ ಹೇಳಬೇಕಾಗಿದ್ದರೆ, ಅಲ್ಲಿ rocky soil, black cotton soil, table land soil ಎಂದು ಅನೇಕ ತರಹ soil ಇದೆ. ಒಂದೇ ಹಳ್ಳಿಯಲ್ಲಿಯೇ ಜಮೀನುಗಳಲ್ಲಿ ಎಷ್ಟೋ ವ್ಯತ್ಯಾಸವಿರುತ್ತದೆ. ನಾವುಗಳು ಇಲ್ಲಿ ಕುಳಿತು ಖುಷ್ಕಿ ಜಮೀನಿಗೆ ಇಷ್ಟು ಮಾಡಿ, ತರೀ ಜಮೀನಿಗೆ ಇಷ್ಟು ಮಾಡಿ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅದು ಜಟಿಲವಾದ ಪ್ರಶ್ನೆ ಒಂದು ಹಳ್ಳಿಯಲ್ಲಿರುವ ಎಲ್ಲ ಭೂಮಿಗಳೂ ಒಂದೇ ಸಮನೆ ಇರುವುದಿಲ್ಲ. ಅದರಲ್ಲಿಯೂ ವ್ಯತ್ಯಾಸವಿರುತ್ತದೆ, fertility ಯಲ್ಲಿ ವ್ಯತ್ಯಾಸವಿರುತ್ತದೆ. ಇಂಥ ಜಟಿಲ ಸಮಸ್ಯೆಗಳಿವೆ ಎಂದು family holding ಎನ್ನುವುದನ್ನು ಒಂದೊಂದು local area ಮಾಡಿ ಆದಕ್ಕೆ ಎಲ್ಲೆಲ್ಲಿ ಎಷ್ಟೆಷ್ಟು ಮಾಡಬೇಕು ಎನ್ನುವುದನ್ನು ಕೂಲಂಕಷವಾಗಿ ಸಂಚಾರಮಾಡಿ ನಿರ್ಧಾರಮಾಡಬೇಕೆಂದು ಲ್ಯಾಂಡ್ ಕಮಿಷನ್‌ಮಾಡಿದ್ದೇವೆ. ಈಗ ಏಕರೇಜ್ ಪ್ರಕಾರ ನಾವೇ ನಿರ್ಧಾರಮಾಡೋಣವೆಂದರೆ ಬಹಳ ತ್ರಾಸವಾಗುತ್ತದೆ. ಹೈದರಾಬಾದ್ ಆಕ್ಟಿನಲ್ಲಿರುವಂತೆ maximum acreage fix ಮಾಡಬಹುದು. ಎಂದರೆ ಒಂದು ಗೊತ್ತುಮಾಡಿದ ಮಿತಿಗಿಂತ ಮೇಲ್ಪಡಬಾರದು ಎಂದು ಮಾಡಬಹುದು. ಹೈದರಾಬಾದ್ ಆಕ್ಟಿನಲ್ಲಿ ಈ ರೀತಿ ಇದೆ:

> "Government shall determine the extent of land which shall be regarded as a family holding for each class in each kind of soil in all the local areas which may be determined for the State subject to the limits specified below . . . .

Limits : (1) Wet land.—Single crop each year : All kinds of soils :

(a) Classification of 8 annas or above : 6 acres

(b) All other Classes 9 ,,

(2) Dry land.—

(a) Black cotton or laterite soil.—

(i) Class I with soil classification of 8 annas or above : 24 acres

(ii) All other Classes 36 ,,

(SRI VEERENDRA PATIL)

(b) Chalka soils.—

(i) Class I with soil classification of 8 annas or above. 48 acres

(ii) All other Classes 72 ,,

Provided that the Government may, by general or special order, direct that the limits of the family holdings specified in this sub-section shall for any local area be varied if the Government is satisfied, that such variation is necessary or expedient for ensuring that the value of produce after deducting 50% therefrom as cost of cultivation is Rs. 800.''

ತಾವೂ ಆ ರೀತಿ ಬೇಕಾದರೆ maximum fix ಮಾಡಬಹುದು. ಹಾಗಿಲ್ಲದೆ family holdingನಲ್ಲಿ dry land ಎಷ್ಟಿರಬೇಕು ಮತ್ತು wet land ಎಷ್ಟಿರಬೇಕು ಎಂದು ನಾವೇ ಮಾಡುತ್ತೇವೆಂದರೆ dangerous step ಆಗುತ್ತದೆಂದು ನನ್ನ ಕಲ್ಪನೆ. ಇದನ್ನು ತಾವು ವಿಚಾರ ಮಾಡಬೇಕು. Maximum acreage fix ಮಾಡುವುದರಲ್ಲಿ ನನ್ನ ಅಭ್ಯಂತರವಿಲ್ಲ.

Future lease ಬಗ್ಗೆ ನಾನು ಹೆಚ್ಚು ಮಾತನಾಡುವ ಆವಶ್ಯಕತೆ ಇಲ್ಲ. ಸಾಕಷ್ಟು ನಿರ್ಬಂಧಗಳನ್ನು ಹಾಕಿದ್ದಾರೆ. ಹೈದರಾಬಾದಿನಲ್ಲಿ ಮೂರು ಕುಟುಂಬ ಹಿಡುವಳಿಯನ್ನು ಹೊಂದಿರುವ ಭೂಮಾಲೀಕರು ಯಾರಾದರೂ ಇದ್ದರೆ ಭೂಮಿಯನ್ನು ಗೇಣಿಗೆ ಕೊಡುವ ಸಲುವಾಗಿ ಅವಕಾಶವಿತ್ತು. ಈ ಮಸೂದೆಯಲ್ಲಿ ಒಂದು ಕುಟುಂಬ ಹಿಡುವಳಿಗಿಂತ ಹೆಚ್ಚಿಗೆ ಭೂಮಿ ಇದ್ದವನು ಯಾರಾದರೂ ಗೇಣಿಗೆ ಕೊಟ್ಟರೆ, ಲೀಸ್ ಮಾಡಿದರೆ ಸರ್ಕಾರದವರು ಅದನ್ನು ರೆಕಗ್ನೈಸ್ ಮಾಡುವುದಿಲ್ಲ. ಅದರ ಅರ್ಥ ಇಷ್ಟೆ. ಅವನ ಕೈಹಿಡಿದು ಕೊಡಬಾರದು ಎಂದು ಈ ಕಾನೂನಿನಿಂದ ಮಾಡುವುದಕ್ಕೆ ಸಾಧ್ಯವಿಲ್ಲ. ಒಂದು ವೇಳೆ lease out ಮಾಡಿದರೆ ಅದರ ಪರಿಣಾಮವೇನು ಎಂದರೆ ಅವನು tenant at will ಆಗಿ ಉಳಿಯುತ್ತಾನೆ. ಇದನ್ನು ಮಾನ್ಯ ಮಂತ್ರಿಗಳು ವಿಚಾರ ಮಾಡಬೇಕು. ಯಾರಾದರೂ ಇಂಥ ಜಮೀನನ್ನು ಗೇಣಿಗೆ ತೆಗೆದುಕೊಂಡಿದ್ದು ಒಂದೆರಡು ವರ್ಷದ ಮೇಲೆ ಬಿಡಿಸಿಬಿಟ್ಟರೆ ಟ್ರಿಬ್ಯುನಲ್‌ಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಕೋರ್ಟಿಗೇನಾದರೂ ಹೋದರೆ ಕಾನೂನಿಗೆ ವಿರುದ್ಧವಾಗಿ ಗೇಣಿಗೆ ಕೊಟ್ಟಿದ್ದಾನೆ, ನೀನು ತೆಗೆದು ಕೊಂಡಿದ್ದೀಯ, ಅದನ್ನು ರೆಕಗ್ನೈಸ್ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಅಂದಮೇಲೆ ಗೇಣಿದಾರನಿಗೆ ರಕ್ಷಣೆ ಇಲ್ಲ. ಭೂಮಾಲೀಕರು ಬಹಳ comfortable positionನಲ್ಲಿರುತ್ತಾರೆ. ಈ ಎಲ್ಲ transactions recognise ಮಾಡುವ ಹಾಗೆಯೇ ಇಲ್ಲ. ಕೋರ್ಟಿಗೆಹೋಗಿ ಪರಿಹಾರವನ್ನು ಪಡೆಯುವುದಕ್ಕೂ ಸಾಧ್ಯವಿಲ್ಲ. ಈ ಕಾನೂನಿನಲ್ಲಿ ಇಂಥದನ್ನು ತಪ್ಪಿಸುವುದಕ್ಕೆ, ತಡೆಯುವುದಕ್ಕೆ ಅವಕಾಶವಿಲ್ಲ. ಒಂದು ಕುಟುಂಬ ಹಿಡಿವಳಿಗಿಂತ ಹೆಚ್ಚಿದ್ದು lease out ಮಾಡಿದರೆ, ಅದರಿಂದ ಬಾಧಕವಾಗುವಂಥ ಅಥವಾ ಆ ರೀತಿ ಮಾಡಲಾರದಂಥ ಒಂದು ಪ್ರಾವಿಷನ್ ಸೇರಿಸದೆ ಹೋದರೆ ಭೂಮಾಲೀಕನು ತನ್ನ ಮನಸ್ಸಿಗೆ ಬಂದಹಾಗೆ lease out ಮಾಡುತ್ತಿರುತ್ತಾನೆ. ಅದರ ಸಲುವಾಗಿ ಇದನ್ನು ವಿಚಾರ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

Rent ಎಷ್ಟು ಕೊಡಬೇಕು ಎನ್ನುವುದರ ಬಗ್ಗೆ ಈಗಾಗಲೇ ಹೇಳಿದ್ದಾರೆ. ನಾನು ಹೇಳಬೇಕಾದರೆ ಹೈದರಾಬಾದಿನಲ್ಲಿ ಸಾಕಷ್ಟು ವಿಚಾರಮಾಡಿ ಅಲ್ಲಿ multiples of land ಇಟ್ಟಿದ್ದೇವೆ. ಈ ಬಿಲ್ಲನ್ನು ಯಾರಾದರೂ ಓದಿ ನೋಡಿದರೆ ಹೆಜ್ಜೆ ಹೆಜ್ಜೆಗೂ ಲಿಟಿಗೇಷನ್ ಸಲುವಾಗಿ ಸಾಕಷ್ಟು ಅವಕಾಶವಿದೆ. ಪ್ರತಿಯೊಂದು ವಿಷಯಕ್ಕೂ ಲಾಯರುಗಳ ಹತ್ತಿರ ಮತ್ತು ಕೋರ್ಟಿಗೆ ಹೋಗಬೇಕು. ಇದರಿಂದ ಮೂರುನಾಲ್ಕು ಪಟ್ಟು ಹಣ ಖರ್ಚಾಗುತ್ತದೆ. ಕಾನೂನು ಮಾಡುವುದರಲ್ಲಿ ಬುದ್ಧಿವಂತಿಕೆಯನ್ನು ತೋರಿಸಬೇಕಾಗಿದ್ದರೆ ಲಿಟಿಗೇಷನ್ನಿಗೆ ಬಹಳ ಕಡಮೆ ಅವಕಾಶವಿರುವಂತೆ ಮಾಡಬೇಕು. Land revenue ಮೇಲೆ ಗೇಣಿಯನ್ನು ನಿಗದಿ ಮಾಡಬೇಕು. ಹಾಗಿಲ್ಲದೆ ಒಟ್ಟು ಉತ್ಪತ್ತಿಯ ¼ ಭಾಗ, 1/5 ಭಾಗ ಎಂದು ಮಾಡಿದರೆ, ಎಲ್ಲೆಲ್ಲಿ ಎಷ್ಟೆಷ್ಟು ಉತ್ಪತ್ತಿ ಇದೆ ಎಂಬುದನ್ನು Land Commission ನಿರ್ಧರಿಸಬೇಕಾಗುತ್ತದೆ. ಆರೇಳು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ standard rent, local area ಇವನ್ನೆಲ್ಲ ಗೊತ್ತುಮಾಡಿ ಎನ್ನುವುದನ್ನು ಕಮಿಷನ್ನಿಗೆ ವಹಿಸಿದರೆ ಬಹಳ ಕಷ್ಟವಾಗುತ್ತದೆ. ಈ ಬಗ್ಗೆ land survey ಮಾಡಿಲ್ಲ, ಸೆಟಲ್‌ಮೆಂಟ್ ಆಗಿಲ್ಲ ಎಂದು ಒಂದು ವಾದವನ್ನು ಹೇಳುತ್ತಾರೆ. ಸೆಟಲ್‌ಮೆಂಟ್ ಆಗಿಲ್ಲವೆಂದರೆ ಅದರಿಂದ ಒಂದು solution ತೋರಿಸಿದ ಹಾಗೆ ಅಲ್ಲ. Land Survey and Settlement ಮಾಡಲು ಬೇಕಾದ ಸಿಬ್ಬಂದಿ ವಗೈರೆ ಜಾಸ್ತಿಮಾಡಿ, ಎಲ್ಲ ಭಾಗಗಳಲ್ಲಿಯೂ resettlement ಮಾಡಿ ಹಾಗೆ ಮಾಡಿದ ಮೇಲೆ ಭೂಕಂದಾಯದ ಇಷ್ಟು ಪಟ್ಟು ಎಂದು ಹೇಳಬಹುದು. ಈಗಿರುವಂತೆಯೇ ಉತ್ಪತ್ತಿಯಲ್ಲಿ ¼ ಭಾಗ, 1/5 ಭಾಗ ಎಂದು ಇದ್ದರೆ ಲ್ಯಾಂಡ್ ಕಮಿಷನ್ ಅವರು ಆಯಾ ಭಾಗದಲ್ಲಿ standard rent ಏನು ಎಂಬುದನ್ನು ನಿರ್ಧರಿಸಲು crop cutting experiment ಮಾಡಿ, average rainfall ನೋಡಿಕೊಂಡು ಕೆಲಸಮಾಡಬೇಕಾಗುತ್ತದೆ. ಇಷ್ಟು ಕೆಲಸಕ್ಕಾಗಿಯೇ ಲ್ಯಾಂಡ್‌ಕಮಿಷನ್ ನೇಮಿಸಿ ದುಡ್ಡು ಖರ್ಚುಮಾಡಬೇಕಾಗುತ್ತದೆ. ಭೂಕಂದಾಯದ ಮೇಲೆ ಇಷ್ಟು ಪಟ್ಟು ಎಂದು ತೀರ್ಮಾನಮಾಡುವುದು ಯೋಗ್ಯವೆಂದು ಹೇಳುತ್ತಿದ್ದೇನೆ. ಹೈದರಾಬಾದ್ ಮತ್ತು ಬೊಂಬಾಯಿ ಕಡೆ ಎಲ್ಲ ವಿಚಾರಗಳನ್ನೂ ವಿಮರ್ಶೆಮಾಡಿ ಭೂಕಂದಾಯದ ಐದು ಪಟ್ಟು ಮ್ಯಾಕ್ಸಿಮಮ್ ರೆಂಟ್ ಇರಬೇಕೆಂದು ನಿಗದಿಮಾಡಿದ್ದಾರೆ.

6 P.M.

ಇನ್ನೊಂದು ವಿಷಯ ; ರಿಸಂಪ್ಷನ್ನಿನ ಬಗ್ಗೆ ಯಾವ ಪರಿಣಾಮ ವಾಗುತ್ತದೆ ಎನ್ನುವುದನ್ನು ಹೇಳುತ್ತೇನೆ. ನಮ್ಮ ಏರಿಯಾದಲ್ಲಿ ಪರ್ಸನಲ್ಲು ಕಲ್ಟಿವೇಷನ್ನಿಗಾಗಿ ರಿಸ್ಯೂಮು ಮಾಡಬೇಕಾದರೆ, ಎಂದರೆ ಭೂಮಿಯನ್ನು ಟೆನೆಂಟಿನಿಂದ ಬಿಡಿಸಿಕೊಳ್ಳಬೇಕಾದರೆ 2,400 ರೂಪಾಯಿ ಗಳಷ್ಟು ಬೆಲೆಯುಳ್ಳದ್ದು, ಇಷ್ಟು ಮಾತ್ರ ಬಿಡಿಸಿಕೊಳ್ಳಬಹುದು ಎಂದಿದೆ. ಆದರೆ ಈ ಬಿಲ್ಲನಲ್ಲಿ 1,200 ರೂಪಾಯಿಗಳಿಂದ 3,600 ರೂಪಾಯಿಗಳವರೆಗೆ ಬಿಡಿಸಿಕೊಳ್ಳಲು ಕೊಟ್ಟಿದ್ದಾರೆ. ಈ ರೀತಿಯಾಗಿ 3,600 ರೂಪಾಯಿಗಳವರೆಗೆ ಎಂದು ನಮ್ಮ ಹೈದರಾ

ಬಾದಿನ ಆಕ್ಟಿನಲ್ಲಿರಲಿಲ್ಲ. ಇಲ್ಲಿ 1,200 ರೂಪಾಯಿಗಳು ಎಂದು ಈ ಬಿಲ್ಲಿನಲ್ಲಿ ಮಾಡಿರುವ ಬಗ್ಗೆ ಸರಿಯಾದ ಸೇಫ್‌ಗಾರ್ಡ್ಸ್ ಮತ್ತು ಸೆಕ್ಯೂರಿಟಿ ಇರುವಂತೆ ಮಾಡಬೇಕೆಂದು ನಾನು ಕೇಳುತ್ತೇನೆ.

Sri C. J. MUCKANNAPPA.—May I know how long we are sitting ?

Sri Y. VEERAPPA.—Day before yesterday it was decided to sit till 7 P.M. to-day. Yesterday we did not decide to sit till 7.

Sri KADIDAL MANJAPPA.—If there are a number of Hon'ble Members who are anxious to participate in the debate, if Hon'ble Members can make up their mind to sit till 7, we will be giving opportunities to several members to express their views.

Mr. DEPUTY SPEAKER.—So we shall sit up to 7 P.M.

ಶ್ರೀ ವೀರೇಂದ್ರ ಪಾಟೀಲ್.—ಗವರ್ನಮೆಂಟಿನವರು ಕೊಟ್ಟಿರುವ ನೋಟಿನಲ್ಲಿ ಅರವತ್ತು ಎಕರೆಗಳು ಎಂದು ಹೇಳಿದ್ದಾರೆ. ಅದು ಹೇಗಾಗುತ್ತದೆ? ಎಲ್ಲವೂ ಲ್ಯಾಂಡ್ ಕಮಿಷನ್ನಿನ ಮುಂದೆ ಹೋಗಬೇಕು ಮತ್ತು ಅವರು ನಿರ್ಣಯಮಾಡಬೇಕು. ಆರೀತಿ ಹೇಳುವುದಕ್ಕೆ ಸಾಧ್ಯವಿಲ್ಲ. ನಮ್ಮ ಕಡೆ ಬರೀ ಮರಳು ಇರುವಂತಹ ಭೂಮಿ ಇದೆ. ಇದರಲ್ಲಿ ಏನೂ ಬೆಳೆ ಬೆಳೆಯುವುದಿಲ್ಲ. ಅದರಸಲುವಾಗಿ ಅರವತ್ತು ಎಕರೆಗಳೆಂದು ಇಲ್ಲಿ ಏನು ಹೇಳಿದ್ದಾರೆ, ಅದು ಅಥಾರಿಟಿಟೀವ್ ಸ್ಟೇಟ್‌ಮೆಂಟಲ್ಲ. ಲ್ಯಾಂಡು ಕಮಿಷನ್ ನಿರ್ಣಯಮಾಡುವ ಮುನ್ನ ಈ ರೀತಿ ಹೇಳುವುದು ಸರಿಯಲ್ಲ ಎಂದು ನನ್ನ ವೈಯುಕ್ತಿಕವಾದ ಅಭಿಪ್ರಾಯ.

Sri C. J. MUCKANNAPPA.—He says it is 36 acres for a family holding in Hyderabad. This Bill says it is 60 acres or Rs. 1,200. Now he says that Government have absolutely no justification to make the statement. I want to know whether the Government is right or the member.

Sri KADIDAL MANJAPPA.—Both the member and the Government are right. The extent mentioned in my speech is a hypothetical calculation.

ಶ್ರೀ ವೀರೇಂದ್ರ ಪಾಟೀಲ್.—ಈ ಬಿಲ್ಲಿನ ಹತ್ತನೆಯ ಕಲಮಿನಲ್ಲಿ ಈ ಬಿಲ್ಲು ಪಾಸಾಗಿ ಆಕ್ಟು ಆಗುವ ಮುನ್ನ ಯಾರಾದರೂ ಟೆನೆಂಟಿಗೆ ಭೂಮಿಯ ಸ್ವಾಧೀನತೆ ತಪ್ಪಿ ಹೋಗಿದ್ದರೆ ಅದನ್ನು ಆತನಿಗೆ ಕೊಡುವ ಬಗ್ಗೆ ಒಂದು ಪ್ರೊಸೀಜರು ಇದೆ ಮತ್ತು ಭೂಮಿಯನ್ನು ಸಾಧೀನಕ್ಕೆ ತೆಗೆದುಕೊಳ್ಳಲು ಟ್ರಿಬ್ಯೂನಲ್ಲಿಗೆ ಹೋಗುವುದಕ್ಕೆ ಅವಕಾಶವಿದೆ ಎಂದು ಇದರಲ್ಲಿ ಹೇಳಿದ್ದಾರೆ. ಸರೆಂಡರು ಆದ ಭೂಮಿಯನ್ನು ಬೀಳುಬಿಟ್ಟುಕೊಂಡಿರಬಹುದು. ಅಥವಾ ಭೂಮಿಯನ್ನು ಬಿಡಿಸಿಕೊಂಡಿರಬಹುದು. ಇಲ್ಲಿ ಟೆನೆಂಟಿಗೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಟ್ರಿಬ್ಯೂನಲ್ಲಿಗೆ ಹೋಗಬಹುದು ಎಂದಿದೆ. ಇದರಿಂದ ಕೆಟ್ಟ ಪರಿಣಾಮವಾಗುತ್ತವೆಂದು ನನಗನಿಸುತ್ತದೆ. ಹೈದರಾಬಾದು ಆಕ್ಟಿನಲ್ಲಿರುವ ಪ್ರಾವಿಷನ್ನಿನ ಪ್ರಕಾರ ಯಾವುದೇ ಅಪ್ಲಿಕೇಷನ್ನು ಸರೆಂಡರಿಗಾಗಿ ಬಂದರೆ ಅದನ್ನು ಕೂಡಲೇ ಅಡ್ಮಿಟ್ಟು ಮಾಡುತ್ತಿರಲಿಲ್ಲ. ಯಾವುದು ಸರೆಂಡರು ಆಗಬೇಕೆಂದು ಹೇಳುತ್ತಾರೋ ಅಂತಹ ಗ್ರಾಮಕ್ಕೆ ತಹಶೀಲುದಾರರೋ ಅಥವಾ ಬೇರೆ ಅಧಿಕಾರಿಗಳೋ ಹೋಗಿ ಎನ್‌ಕ್ವೈರಿ ಮಾಡಿಕೊಂಡು ಬಂದು ಅದು ವಾಸ್ತವವಾಗಿ ಕಂಡುಬಂದನಂತರ ಸರೆಂಡರು ಅಪ್ಲಿಕೇಷನ್ನನ್ನು ಅಡ್ಮಿಟ್ಟು ಮಾಡಿಕೊಳ್ಳುತ್ತಿದ್ದರು. ಹೈದರಬಾದು ಆಕ್ಟಿನಲ್ಲಿ ಭೂಮಿ ಯಾರ ಪೊಸೆಷನ್ನಿನಲ್ಲಿ ಇತ್ತೋ ಅವರಿಗೆಲ್ಲ ಪ್ರೊಟೆಕ್ಟೆಡು ಟೆನೆಂಟು ಎಂದು ಹೇಳಬಹುದು ಎಂದು ಇತ್ತು. ಪ್ರೊಟೆಕ್ಟೆಡ್ಡು ಟೆನೆಂಟು ಅಲ್ಲದವರು ಮನೆಗೆ ಹೋಗಬೇಕು. ಇದನ್ನು ಸ್ವಲ್ಪ ವಿಚಾರಮಾಡಬೇಕು. ಸರೆಂಡರು ಮಾಡಿ ಮನೆಯಲ್ಲಿ ಕುಳಿತಿರುವವರನ್ನು ಎಬ್ಬಿಸಿ ಅವರಿಗೆ ಸುಮ್ಮನೆ ಈ ರೀತಿಯ ಅವಕಾಶಮಾಡಿಕೊಡಲಾಗುತ್ತಿದೆ. ಈ ರೀತಿಯ ಕಾನೂನು ಮಾಡುವುದರಿಂದ ಒಂದು ರೀತಿಯ ಕೆಟ್ಟ ಪರಿಣಾಮ ಬರುತ್ತದೆ. ಇದರ ಬಗ್ಗೆ ತಾವು ಸ್ವಲ್ಪ ವಿಚಾರಮಾಡಬೇಕೆಂದು ನಾನು ಅಪೇಕ್ಷೆಪಡುತ್ತೇನೆ.

ಇನ್ನೊಂದು ಮಾತು ಈ ಹೊಸ ಬಿಲ್ಲಿನಲ್ಲಿ ಟೆನೆಂಟಿಗೂ ಮತ್ತು ಪ್ರೊಟೆಕ್ಟೆಡ್ ಟೆನೆಂಟಿಗೂ ಮೂರು ಫ್ಯಾಮಿಲಿ ಹೋಲ್ಡಿಂಗಿನಷ್ಟು ಭೂಮಿ ತೆಗೆದುಕೊಳ್ಳುವ ಅಧಿಕಾರ ಕೊಟ್ಟಿದ್ದಾರೆ. ಹೈದರಾಬಾದಿನಲ್ಲಿ ಪ್ರೊಟೆಕ್ಟೆಡ್ ಟೆನೆಂಟಿಗೆ ಒಂದೇ ಫ್ಯಾಮಿಲಿ ಹೋಲ್ಡಿಂಗ್ ಪರ್‌ಚೇಸ್ ಮಾಡುವ ರಿಸ್ಟ್ರಿಕ್ಷನ್ ಇದೆ. ಅವನು ಒಂದು ಫ್ಯಾಮಿಲಿ ಹೋಲ್ಡಿಂಗಿಗಿಂತ ಹೆಚ್ಚು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈಗ ಮೂರು ಫ್ಯಾಮಿಲಿ ಹೋಲ್ಡಿಂಗ್ಸ್ ತೆಗೆದುಕೊಳ್ಳಿ ಕೊಡುತ್ತೇವೆ ಎಂದು ಹೇಳುತ್ತಿದ್ದೀರಿ. ಇದರಿಂದ ನಿಮಗೆ ಹಂಚಲ ಹೆಚ್ಚು ಭೂಮಿ ಹೇಗೆ ಸಿಕ್ಕಬೇಕು? ನೀವು ಹೆಚ್ಚು ಭೂಮಿ ಸಿಕ್ಕಿದ್ದನ್ನು ಹಂಚಬೇಕು ಎಂದು ಉದ್ದೇಶ ಇಟ್ಟುಕೊಂಡಿದ್ದೀರಿ. ಆದರೆ ಒಬ್ಬೊಬ್ಬ ಟೆನೆಂಟಿಗೆ ಮೂರು ಫ್ಯಾಮಿಲಿ ಹೋಲ್ಡಿಂಗಿನಷ್ಟು ಖರೀದಿಗೆ ಕೊಡುತ್ತೇವೆ ಎಂದು ಹೇಳಿದರೆ ನೀವು ಏನು ಮೂರು ಲಕ್ಷ ಎಕರೆ ಜಮೀನು ಉಳಿಯುತ್ತದೆ ಎಂದು ತಿಳಿದುಕೊಂಡಿದ್ದೀರೋ ಅದು ಉಳಿಯುವ ಹಾಗಿಲ್ಲ. ಹೈದರಾಬಾದ್ ಆಕ್ಟ್ ನೋಡಿ, ಒಂದು ಫ್ಯಾಮಿಲಿ ಹೋಲ್ಡಿಂಗಿನಷ್ಟು ತೆಗೆದುಕೊಳ್ಳಬಹುದು. ಅದಕ್ಕಿಂತ ಹೆಚ್ಚಿಗೆ ಖರೀದಿಗೆ ತೆಗೆದುಕೊಳ್ಳುವ ಹಾಗಿಲ್ಲ. ಒಂದು ಫ್ಯಾಮಿಲಿ ಹೋಲ್ಡಿಂಗ್ ಕೊಟ್ಟು ಉಳಿಕೆ ಅದದ್ದು ಸರ್ಕಾರದ ವಶಕ್ಕೆ ತೆಗೆದುಕೊಂಡರೆ, ಅದು ಸರಿ ಎಂದು ಕಾಣುತ್ತದೆ.

ಅದೂಅಲ್ಲದೆ ಇನ್ನೊಂದು ವಿಚಾರ. ಕಾಂಪೆನ್‌ಸೇಷನ್ ಬಗ್ಗೆ 15 ಪಟ್ಟು ಕೊಡುತ್ತೇವೆಂದು ಹೇಳಿದ್ದಾರೆ. ಆ ವಿಷಯದಲ್ಲಿ ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ಆರು ಪಟ್ಟು ಕೊಡಬೇಕು ಎಂದು ಇದರಲ್ಲಿ ಹೇಳಿದ್ದಾರೆ. ನಮ್ಮಲ್ಲಿ ಟೆನೆಂಟಿಗೆ ಭೂಮಿಯನ್ನು ಮಾರಬಹುದು. ಪರ್ಮನೆಂಟ್ ಲೀಜ್ ಹೋಲ್ಡರ್ ಎಂದು ಡಾಕ್ಯುಮೆಂಟ್ ರಿಜಿಸ್ಟರ್ ಮಾಡಿಸಿಕೊಳ್ಳಬಹುದು. ಹಾಗೆ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳುವ ಮೊದಲು ಲ್ಯಾಂಡ್ ಲಾರ್ಡಿಗೆ ಕಾಂಪೆನ್‌ಸೇಷನ್ ಕೊಡಬೇಕು. ಆ ರೀತಿ ನಜರಿ ಕೊಟ್ಟು ಈಗಾಗಲೇ ಜಮೀನು ತೆಗೆದುಕೊಂಡಿದ್ದಾರೆ. ಅವರಿಗೆ ಮತ್ತೆ ಆರು ಪಟ್ಟು ಕೊಡಿ ಎಂದು ಹೇಳುವುದು ಅನ್ಯಾಯ. ಆರು ಪಟ್ಟು ಫೇರ್‌ರೆಂಟ್ ಏನು ಇದೆ ಅದನ್ನು ಈಗಾಗಲೇ ಕೊಟ್ಟಿದ್ದಾರೆ. ಅದು ಕೊಡಬಾರದು ಎಂದು ಪ್ರಾವಿಷನ್‌ಮಾಡಬೇಕಾಗುತ್ತದೆ. ಆರು ಪಟ್ಟಿಗಿಂತ ಕಡಮೆ ಕೊಟ್ಟಿದ್ದರೆ ಅದನ್ನು ಬಿಟ್ಟು ಬಾಕಿ ಕೊಡಬೇಕು ಎಂದು ಹೇಳುವುದು ಯೋಗ್ಯವಾದ ಮಾತು. ಈಗ ಹತ್ತು ಸಾವಿರ

(ಶ್ರೀ ವೀರೇಂದ್ರ ಪಾಟೀಲ್)

ಕೊಟ್ಟಿದ್ದರೂ ಪರವಾಯಿಲ್ಲ. ಇನ್ನೂ ಆರು ಪಟ್ಟು ಕೊಡಿ ಎಂದು ಹೇಳುವುದು ಸರಿಯಲ್ಲ.

ಒಬ್ಬ ಸದಸ್ಯರು.—ಕೊಡದೆ ಇದ್ದರೆ ?

ಶ್ರೀ ವೀರೇಂದ್ರಪಾಟೀಲ್.—ಕೊಡದೆ ಇದ್ದರೆ ಪ್ರಶ್ನೆಯೇ ಇಲ್ಲ. ಆರು ಪಟ್ಟು ಕೊಡಿ ಎಂದು ಹೇಳುತ್ತಾರೆ ಯಾವ ಕನ್‌ಸಿಡರೇಷನ್‌ನಿಂದ ಹೇಳುತ್ತಾರೋ ನನಗೆ ಗೊತ್ತಿಲ್ಲ. ಪರ್ಮನೆಂಟ್‌ಲೀಸ್ ತೆಗೆದುಕೊಳ್ಳುವ ಮುಂದೆ ಭೂಮಿಯನ್ನು ಯಾವರೀತಿ ಪರ್ಚೇಸ್ ಮಾಡುತ್ತಾರೆಂದರೆ ಅದಕ್ಕೆ ಹಣ ಕೊಡುತ್ತಾರೆ. ಪರ್ಚೇಸ್‌ಲೀಸ್ ಮಾಡಿದಮೇಲೆ ಆ ಭೂಮಿ ವಂಶ ಪಾರಂಪರ್ಯವಾಗಿ ಟೆನೆಂಟ್ ವಶಕ್ಕೆ ಇರಬೇಕು ಎಂದು ಆಗುತ್ತದೆ.

ಶ್ರೀ ಡಿ. ಮೂಕಪ್ಪ.—ಅಗ್ರಿಮೆಂಟ್ ಮಾಡುವುದಕ್ಕೆ ಪರಿಹಾರ ಕೊಟ್ಟಿರುತ್ತಾರೆಯೇ ?

ಶ್ರೀ ವೀರೇಂದ್ರಪಾಟೀಲ್.—ನಾನು ಅದೇ ಹೇಳಿದೆ. ಆರು ಪಟ್ಟು ಎಂದು ಹೇಳುತ್ತಿದ್ದಾರೆ. ಈಗಾಗಲೇ ಅದನ್ನ ಕೊಟ್ಟಿರುತ್ತಾರೆ. ಹೆಚ್ಚು ಕೊಡಬೇಕಾದರೆ ಕೊಡಿ ಎಂದು ಹೇಳಬಹುದು. ಈಗಾಗಲೇ ಆರು ಪಟ್ಟು ಕೊಟ್ಟಿರುತ್ತಾರೆ ಮತ್ತೆ ಕೊಡಿ ಎಂದು ಹೇಳುವುದು ಅನ್ಯಾಯ. ಇದನ್ನು ಆಲೋಚನೆ ಮಾಡಬೇಕು. ಈ ಬಿಲ್ಲಿನಲ್ಲಿ ಪ್ರೊಟೆಕ್ಟೆಡ್ ಟೆನೆಂಟ್ ಭೂಮಿ ತೆಗೆದುಕೊಳ್ಳಬೇಕು ಎಂದು ಹೇಳಿದ ಮೇಲೆ ಇನ್‌ಸ್ಟಾಲ್‌ಮೆಂಟ್ ಕೊಟ್ಟಿಲ್ಲ ಎಂದು ಹೇಳಿದರೆ ಏನು ರೆಮೆಡಿ ಕೊಟ್ಟಿದ್ದಾರೆಂದರೆ ಆಕ್ಯುಪೆನ್ಸಿರೈಟ್ ಕೊಡಲಾರದೆ ಟೆನೆಂಟ್ ರೈಟ್ ಕಂಟಿನ್ಯೂ ಮಾಡುತ್ತಾರೆ. ಟೆನೆಂಟ್ ಇದ್ದುಕೊಂಡು ಭೂಮಿ ತೆಗೆದುಕೊಳ್ಳಲು ಯಾರು ತಯಾರಾಗಿರುತ್ತಾರೆ? ಉದಾಹರಣೆಗೆ ಒಂದು ಊರಿನಲ್ಲಿ ಒಂದು ಬಿಲ್ಡಿಂಗ್ ಇದೆ ಎಂದರೆ ಅಲ್ಲಿ ಟೆನೆಂಟ್ ಇದ್ದು ಆ ಬಿಲ್ಡಿಂಗ್ ಮಾರುತ್ತಾರೆ ಎಂದರೆ ಯಾರು ತೆಗೆದುಕೊಳ್ಳುತ್ತಾರೆ ? ಕಾನೂನು ಪ್ರಕಾರ ಇನ್‌ಸ್ಟಾಲ್‌ಮೆಂಟ್ ಕೊಟ್ಟಿಲ್ಲ ಎಂದರೆ ಭೂಮಿ ಸ್ವಾಮಿತ್ವ ತಪ್ಪಿಸಿ ಬಿಡುತ್ತಾರೆ. ಟೆನೆನ್ಸಿರೈಟ್ ಹಾಗೆ ಕಂಟಿನ್ಯೂ ಮಾಡುತ್ತಾರೆ. ವರ್ಷ ವರ್ಷಕ್ಕೆ ರೆಂಟ್ ಮಾತ್ರ ಕೊಡುತ್ತೇವೆ ಎಂದರೆ ಅಂಥ ಭೂಮಿಯನ್ನು ತೆಗೆದುಕೊಳ್ಳುವವರು ಯಾರು? ಇದನ್ನು ಸರ್‌ಪ್ಲಸ್ ಭೂಮಿ ಎಂದು ಟ್ರೀಟ್‌ಮಾಡಿ ಸೆಕ್ಷನ್ 88ರ ಪ್ರಕಾರ ಹಂಚಿ ಇಲ್ಲದಿದ್ದರೆ ಟೆನೆಂಟ್ ಭೂಮಿಯಮೇಲೆ ಇದ್ದಾಗ ಯಾರು ತೆಗೆದುಕೊಳ್ಳಬೇಕು ಎಂದು ಪ್ರಶ್ನೆ ಬರುತ್ತದೆ. ಯಾರೂ ತೆಗೆದುಕೊಳ್ಳುವುದಕ್ಕೆ ತಯಾರು ಇಲ್ಲ. 5-6 ಇನ್‌ಸ್ಟಾಲ್‌ಮೆಂಟ್ ಕೊಟ್ಟು ತಿರುಗಿ ಕೊಟ್ಟಿಲ್ಲ ಎಂದರೆ ಟೆನೆನ್ಸಿ ರೈಟ್ ಕಂಟಿನ್ಯೂ ಮಾಡಿ ಎಂದು ಬಿಲ್ಲಿನಲ್ಲಿ ಹೇಳುತ್ತದೆ. ಟೆನೆನ್ಸಿ ರೈಟ್ ಇದ್ದ ಭೂಮಿಗೆ ದುಡ್ಡು ಕೊಡುವುದಕ್ಕೆ ಯಾರೂ ತಯಾರು ಇಲ್ಲ. ಅವನ ಆಕ್ಯುಪೆನ್ಸಿರೈಟ್ ಹೋಗಬೇಕು. ಭೂಮಿಯನ್ನು ತೆಗೆದುಕೊಳ್ಳುವವರಿಗೆ ಆ ಭೂಮಿಯನ್ನು ಅವರ ವಶಕ್ಕೆ ಕೊಟ್ಟು ಅದನ್ನು ಬಿತ್ತಿ ಬೆಳೆಯುವುದಕ್ಕೆ ಅವಕಾಶ ಕೊಡಬೇಕು. ಇದನ್ನು ವಿಚಾರಿಸಬೇಕು.

ಕಾಂಪೆನ್‌ಸೇಷನ್ ಬಗ್ಗೆ ಸರ್ಕಾರದ ಜವಾಬ್ದಾರಿ ಬಹಳ ಸೀರಿಯಸ್ ಇದ್ದಂತೆ ಕಾಣುತ್ತದೆ. ಕಾಂಪೆನ್‌ಸೇಷನ್ ಕೊಡಬೇಕಾದರೆ 36-37 ಕೋಟಿ ರೂಪಾಯಿ ಬೇಕು. ಈ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳುವುದು ಎಷ್ಟರಮಟ್ಟಿಗೆ ಸಮಂಜಸ ಮತ್ತು ಸೂಕ್ತ ಎಂಬುದನ್ನು ವಿಚಾರಮಾಡಬೇಕಾಗಿದೆ. ಏತಕ್ಕೆಂದರೆ ಈಗ ನಾವು ಹೊಸದಾಗಿ ಡೆಮಾಕ್ರಸಿಯಲ್ಲಿ ಹೆಜ್ಜೆ ಇಡುತ್ತಿದ್ದೇವೆ. ಡೆಮಾಕ್ರಸಿ ಏನು ಎನ್ನುವುದು ಇನ್ನೂ ಸರಿಯಾಗಿ ಗೊತ್ತಿಲ್ಲ. ಭೂಮಿಯನ್ನು ಭೂಮಿಯ ಒಡೆಯನಿಂದ ತೆಗೆದುಕೊಂಡು ಸರ್ಕಾರದವರು ಗ್ಯಾರೆಂಟಿ ಕೊಟ್ಟು ಬಾಂಡು ಕೊಟ್ಟು ರೈತನಿಂದ ಹಣವನ್ನು ಕಲೆಕ್ಟ್‌ಮಾಡುತ್ತಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಇದು ಸುರಕ್ಷಿತವಾದ ದಾರಿಯೇ ಎಂಬುದನ್ನು ಆಲೋಚನೆಮಾಡಿ. ನಾಳೆ ಎಲೆಕ್ಷನ್ ಬಂತು ಎಂದರೆ ಒಂದು ಪಾರ್ಟಿಯವರು ''ನಮ್ಮ ಪಾರ್ಟಿಗೆ ವೋಟುಕೊಡಿ ನಮ್ಮ ಪಾರ್ಟಿಯವರು ಅಧಿಕಾರಕ್ಕೆ ಬಂದರೆ ಅವರಿಂದ ಏನು ಇನ್‌ಸ್ಟಾಲ್‌ಮೆಂಟ್ ಕಲೆಕ್ಟ್‌ಮಾಡುತ್ತಿದ್ದಾರೋ ಅದನ್ನು ಮಾಫಿ ಮಾಡುತ್ತೇವೆ'' ಎಂದು ಹೇಳಬಹುದು. ಆರೀತಿ ಹೇಳುವುದಕ್ಕೆ ಅವಕಾಶವಿದೆ. ಅದನ್ನು ಆಲೋಚನೆಮಾಡಿ. ''ನಮ್ಮ ಕೈಗೆ ಸರ್ಕಾರ ಕೊಡಿ, ಆಮೇಲೆ ನಾವು ಹೇಗೆ ಮಾಡುತ್ತೇವೆ ಎಂಬುದನ್ನು ನೋಡಿ'' ಎಂದು ಹೇಳುತ್ತಾರೆ. ಕಮ್ಯೂನಿಸ್ಟ್ ಪ್ರಚಾರ ಮಾಡುತ್ತಾರೆ, ನಮಗೆ ಓಟುಕೊಟ್ಟರೆ ಪ್ರತಿಯೊಬ್ಬರಿಗೂ ಐದು ಎಕರೆ ಭೂಮಿಯನ್ನು ಹಂಚುತ್ತೇವೆ ಎಂದು.

Sri C. J. MUCKANNAPPA.—You are going in the same direction.

ಶ್ರೀ ವೀರೇಂದ್ರಪಾಟೀಲ್.—ಅದು ಬೇರೆ ದಾರಿ. 36-37 ಕೋಟಿಯಷ್ಟು ದೊಡ್ಡ ಜವಾಬ್ದಾರಿ ತೆಗೆದುಕೊಂಡು ಒಮ್ಮೆ ನೋಟಿಫಿಕೇಷನಿನಲ್ಲಿ ಭೂಮಿ ಸರ್ಕಾರಕ್ಕೆ ಬಂತು ಎಂದು 'ಡಿಕ್ಲೇರ್‌ಮಾಡಿ ಭೂ ಮಾಲೀಕನಿಗೆ ಕ್ಯಾಷ್ ಕೊಟ್ಟು ಬಾಂಡ್ ಕೊಟ್ಟು ಗ್ಯಾರೆಂಟಿ ಕೊಟ್ಟು ಅನಂತರ ರೈತರ ಹತ್ತಿರ ಹೋಗಿ ದುಡ್ಡು ಕೊಡಿ ಎಂದು ಇನ್‌ಸ್ಟಾಲ್‌ಮೆಂಟ್ ಕಲೆಕ್ಟ್ ಮಾಡುವುದಕ್ಕೆ ಸಾಧ್ಯವಿದೆಯೇ ಎನ್ನುವುದನ್ನು ವಿಚಾರ ಮಾಡಿ. ಇದು ನನ್ನ ಸಜೆಷನ್. ಪ್ರತಿ ಇನ್‌ಸ್ಟಾಲ್‌ಮೆಂಟ್ ಕಲೆಕ್ಟ್ ಮಾಡಿಕೊಡುವ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳಬೇಕೇ ಹೊರತಾಗಿ ಭೂಮಿ ನಮ್ಮ ಒಡೆತನಕ್ಕೆ ಬಂತು ಎಂದರೆ ಮತ್ತೆ ಎಲ್ಲಾ ಜವಾಬ್ದಾರಿಯನ್ನು ತೆಗೆದುಕೊಂಡರೆ ಅದರಲ್ಲಿ ರಿಸ್ಕ್ ಇದೆ. ಇದನ್ನು ವಿಚಾರಮಾಡಿ. ಇದನ್ನು ನಾನು ಲ್ಯಾಂಡ್‌ಲಾರ್ಡ್ಸ್, ಲ್ಯಾಂಡ್ ಓನರ್ಸ್ ದೃಷ್ಟಿಯಿಂದ ಹೇಳುತ್ತಿಲ್ಲ. ಸರ್ಕಾರ ರೆಸ್‌ಪಾನ್ಸಿಬಿಲಿಟಿ ತೆಗೆದುಕೊಂಡು ಪ್ರತಿ ವರ್ಷವೂ ವಸೂಲುಮಾಡಿಕೊಡುತ್ತೇವೆ ಎಂದು ಹೇಳಬಹುದು. ಆಂಧ್ರ ಪ್ರದೇಶದಲ್ಲಿ ಒಂದು ಆಕ್ಟ್ ಆಗಿದೆ. ಅವರೂ ಕೂಡ ಸರ್‌ಪ್ಲಸ್ ಲ್ಯಾಂಡ್ ತೆಗೆದುಕೊಂಡು ಹಂಚುತ್ತಿದ್ದಾರೆ. ಈರೀತಿ ಎಲ್ಲಾ ಜವಾಬ್ದಾರಿಯನ್ನೂ ಸರ್ಕಾರದವರೇ ತೆಗೆದುಕೊಳ್ಳಬೇಕು ಎಂದು ಇಲ್ಲ. ಪ್ರತಿಯೊಂದು ಇನ್‌ಸ್ಟಾಲ್‌ಮೆಂಟನ್ನೂ ವಸೂಲುಮಾಡಿಕೊಡುತ್ತೇವೆ ಎನ್ನುವ ಸೆಕ್ಯೂರಿಟಿಯನ್ನು ನಾವು ಕೊಡಬೇಕು.

ಒಬ್ಬ ಸದಸ್ಯರು.—ವಸೂಲು ಆಗದೆ ಇದ್ದರೆ ?

ಶ್ರೀ ವೀರೇಂದ್ರಪಾಟೀಲ್.—ಸರ್ಕಾರದವರು ಪ್ರಯತ್ನಮಾಡಿದಾಗ್ಯೂ ವಸೂಲು ಆಗದೆ ಇದ್ದಲ್ಲಿ ಎಂದಾಗ ಸರ್ಕಾರದವರ ತಮ್ಮ ಕೈಯಿಂದ ಕೊಡಬೇಕು ಎಂದು ಆಯಿತು. ಪ್ರೊಟೆಕ್ಟೆಡ್ ಟೆನೆಂಟ್ ಕೊಡುವ ಹಾಗಿಲ್ಲ. ಯಾರಾದರೂ ತಿರುಗಿಬಿದ್ದಾಗ ಕೊಡುವುದಕ್ಕೆ ಶಕ್ತಿ ಇಲ್ಲ ಎಂದಾಗ ಸರ್ಕಾರದ ಜೇಬಿನಿಂದ ಕೊಡಬೇಕು ಎಂದಾಯಿತು.

ಶ್ರೀ ಎಂ. ಆರ್. ಪಾಟೀಲ್.—ಸರ್ಕಾರಕ್ಕೆ ಮತ್ತೊಬ್ಬರ ಸಲುವಾಗಿ ವಸೂಲು ಮಾಡುವ ಶಕ್ತಿ ಎಲ್ಲಿದೆ ?

ಶ್ರೀ ವೀರೇಂದ್ರ ಪಾಟೀಲ್.—ಲ್ಯಾಂಡ್ ರೆವಿನ್ಯೂ ಅರಿಯರ್ಸ್ ಅವರು ಕಲೆಕ್ಟ್ ಮಾಡಬೇಕು. ಇವೊತ್ತಿನ ದಿವಸ ಎಲ್ಲಾ ಜವಾಬ್ದಾರಿಯನ್ನೂ ತೆಗೆದುಕೊಂಡು ಜಮೀನು ಹಂಚುತ್ತೇವೆ ಎಂದು ಹೋಗುವುದು ಯೋಗ್ಯವಲ್ಲ. 20 ವರ್ಷಗಳಲ್ಲಿ ಕೊಡುವುದನ್ನು ಒಂದೇ ದಿವಸ ಟ್ರೆಜರಿಯವರು ಕೊಟ್ಟು ರೈತನಿಂದ 20 ವರ್ಷಗಳವರೆಗೂ ಕಲೆಕ್ಟ್ ಮಾಡಿಕೊಂಡು ಹೋಗಬೇಕು ಎಂದು ಹೇಳಿ ಟ್ರೆಜರಿ ಮೇಲೆ ಭಾರಹಾಕುವುದು ಬೇಡ. ಬೇಕಾದರೆ ಗ್ಯಾರೆಂಟಿ ಕೊಡೋಣ. ರೆಸ್‌ಪಾನ್ಸಿಬಿಲಿಟಿ ತೆಗೆದುಕೊಳ್ಳುತ್ತೇವೆ ಎಂದು ಹೇಳುವುದನ್ನು ವಿಚಾರ ಮಾಡಿ. ಇನ್ನು ಲ್ಯಾಂಡ್ ಸೀಲಿಂಗ್ ಬಗ್ಗೆ ನನ್ನ ಅಭಿಪ್ರಾಯವನ್ನು ಹೇಳುತ್ತೇನೆ.

ಒಬ್ಬ ಸದಸ್ಯರು.—ಇದಕ್ಕೆ ಒಪ್ಪದಿದ್ದರೆ ಮುಂದೆ ಇನ್ನೊಂದು ಕಾನೂನು ಪ್ರತ್ಯೇಕವಾಗಿ ಬರುತ್ತದೆ.

ಶ್ರೀ ವೀರೇಂದ್ರಪಾಟೀಲ್.—ಸೀಲಿಂಗ್ ಬಗ್ಗೆ ನಾನು ವಿರೋಧವಾಗಿ ಹೇಳುತ್ತಾ ಇಲ್ಲ. ಎಗ್ಜಮ್‌ಷನ್‌ನಲ್ಲಿ ಕಾಂಪ್ಯಾಕ್ಟ್ ಬ್ಲಾಕ್ ಡಿಫೈನ್ ಮಾಡಿದ್ದಾರೆ. ಎಫಿಷಿಯೆಂಟ್ಲಿ ಮ್ಯಾನೇಜ್ಡ್ ಕಾಂಪ್ಯಾಕ್ಟ್ ಬ್ಲಾಕ್ ಎಂದು ಹೇಳಿ ಹತ್ತು ಮೈಲಿ ರೇಡಿಯಸ್‌ನಲ್ಲಿ ಇರುವುದು ಎಲ್ಲಾ ಕಾಂಪ್ಯಾಕ್ಟ್ ಬ್ಲಾಕ್ ಎಂದು ಹೇಳಿದ್ದಾರೆ. ಸ್ವಲ್ಪ ಭೂಮಿ ಒಂದು ಹಳ್ಳಿಯಲ್ಲಿ ಇರಬಹುದು. ಮತ್ತೆ ಸ್ವಲ್ಪ ಭೂಮಿ ಸಮೀಪದ ಮತ್ತೊಂದು ಹಳ್ಳಿಯಲ್ಲಿ ಇರಬಹುದು, ಆದರೆ ಒಂದು ಹಳ್ಳಿಯಿಂದ 20 ಮೈಲಿ ದೂರದಲ್ಲಿ ಭೂಮಿ ಇರುವ ಹಾಗಿಲ್ಲ. ಅದನ್ನು ಮ್ಯಾನೇಜ್ ಮಾಡುವ ಹಾಗಿಲ್ಲ. ಇನ್ನು ಹತ್ತು ಮೈಲಿ ರೇಡಿಯಸ್ಸಿನಲ್ಲಿ ಇರುವ ಜಮೀನನ್ನು ಕಾಂಪ್ಯಾಕ್ಟ್ ಏರಿಯಾ ಎಂದು ಹೇಳಿದ್ದಾರೆ. ಅದರೊಳಗೆ ಎಲ್ಲರೂ ಬರುತ್ತಾರೆ. ಅದರಿಂದ ಸೀಲಿಂಗ್ ಉದ್ದೇಶಕ್ಕೆ ವಿರೋಧವಾಗಿ ಪರಿಣಾಮವಾಗಬಹುದು. ಕಾಂಪ್ಯಾಕ್ಟ್ ಬ್ಲಾಕ್ ಬಂದಮೇಲೆ ಅಲ್ಲಿ ಸರಿಯಾದ ಮ್ಯಾನೇಜ್‌ಮೆಂಟ್ ಮಾಡದೇ ಹೋದರೆ ಅಲ್ಲಿಯ ಉತ್ಪತ್ತಿಯ ಮೇಲೆ ಪರಿಣಾಮ ವೇನಾಗುತ್ತದೋ ಗೊತ್ತಿಲ್ಲ. ಹಳೆಯ ಮೈಸೂರಿನಲ್ಲಿ ಸುಮಾರು ಏಳು-ಎಂಟು ಮೈಲಿಯೊಳಗೆ ಇರುವ ಭೂಮಿ ಕಾಂಪ್ಯಾಕ್ಟ್ ಏರಿಯಾದೊಳಗೆ ಬರಬಹುದು. ಏಳು-ಎಂಟು ಮೈಲಿಯೊಳಗೆ ಇರುವ ಭೂಮಿ ಎಫಿಷಿಯಂಟ್ಲಿ ಮ್ಯಾನೇಜ್ಡ್ ಎಂದು ಹೇಳಿದರೆ ಅದರಲ್ಲಿ ಏನೂ ಅರ್ಥವಿಲ್ಲ. ಒಬ್ಬೊಬ್ಬರಿಗೆ ಒಂದೊಂದು ಏರಿಯಾದಲ್ಲಿ 400-500 ಎಕರೆ ಜಮೀನು ಇರುತ್ತದೆ. ಕಂಟಿನ್ಯೂಯಸ್ ಏರಿಯಾ ಆಗಿರುತ್ತದೆ. ಕೆಲವರಿಗೆ ಒಂದೊಂದು ಹಳ್ಳಿ ಹಳ್ಳಿಯೇ ಇರುತ್ತದೆ. ಈ ರೀತಿ ಇರುವುದರಿಂದ 10–15 ಮೈಲಿಗಳ ಒಳಗೆ ಬರತಕ್ಕ ಹಳ್ಳಿಗಳನ್ನು ಒಂದು ಕಾಂಪ್ಯಾಕ್ಟ್ ಬ್ಲಾಕ್ ಎಂದು ಹೇಳಿದರೆ ಹೇಗೆ? ಹೈದರಾಬಾದಿನಲ್ಲಿ ಇದಕ್ಕೆ ಒಂದು ಡೆಫಿನಿಷನ್ ಇದೆ. ಅದನ್ನು ನಾವು ಇಲ್ಲಿ ಅಡಾಪ್ಟ್ ಮಾಡಬೇಕೆಂದು ಸೂಚಿಸುತ್ತೇನೆ.

ಇನ್ನು ಲ್ಯಾಂಡ್ ಕಮಿಷನ್ ಬಗ್ಗೆ ನಾನು ಹೇಳಬೇಕಾದರೆ ಈ ಭೂಸುಧಾರಣೆಯ ವಿಷಯದಲ್ಲಿ ಲ್ಯಾಂಡ್ ಕಮಿಷನ್ನಿನ ಅವಶ್ಯಕತೆ ಇದೆ. ಅದಲ್ಲದೆ ಜತ್ತೀ ಕಮಿಟಿಯವರ ವರದಿಯಲ್ಲಿಯೂ ಒಂದು ಲ್ಯಾಂಡ್ ಕಮಿಷನ್ ರಚನೆ ಅಗತ್ಯವೆಂದು ಸೂಚನೆ ಕೊಟ್ಟಿದ್ದಾರೆ. ಅದರಂತೆಯೇ ನಮ್ಮ ಸರ್ಕಾರದವರು ಹೈಕೋರ್ಟ್ ಜಡ್ಜ್‌ನ್ನು ಆ ಕಮಿಷನ್ನಿನ ಚೇರಮನ್ನರಾಗಿರಬೇಕು ಎಂಬುದಾಗಿ ಈ ಬಿಲ್ಲಿನಲ್ಲಿ ಹೇಳಿದ್ದಾರೆ. ಮತ್ತೆ ಇಬ್ಬರು ನಾಮಕರಣ ಸದಸ್ಯರು ಎಕ್ಸ್‌ಪರ್ಟ್ ಮೆಂಬರಾಗಿರಬೇಕೆಂದು ಹೇಳಿದ್ದಾರೆ. ಅವರು ಅಫಿಷಿಯಲ್ಲೋ, ನಾನ್—ಅಫಿಷಿಯಲ್ಲೋ ಎಂಬುದು ನನಗೆ ಈ ಬಿಲ್ಲಿನಿಂದ ಗೊತ್ತಾಗುವುದಿಲ್ಲ. ಅಂತಹ ಎಕ್ಸ್‌ಪರ್ಟ್ಸ್ ಇದ್ದರೆ ಸರ್ಕಾರದವರು ನಾಮಿನೇಟ್ ಮಾಡಲಿ. ಈ ಕಮಿಟಿಯೊಳಗೆ ಅಸೆಂಬ್ಲಿ ಮತ್ತು ಕೌನ್ಸಿಲ್ ರೆಪ್ರಸೆಂಟೆಟಿವ್‌ಗಳನ್ನು ತೆಗೆದುಕೊಳ್ಳುವ ಅವಶ್ಯಕತೆ ಇದೆ. ಅದಕ್ಕೆ ಅವಕಾಶ ಇದರಲ್ಲೇನೂ ಕಾಣಲಿಲ್ಲ. ಪ್ರತಿಯೊಂದು ಲೋಕಲ್ ಏರಿಯಾದಲ್ಲೂ ಗೇಣೀದಾರರು ಎಷ್ಟು ಬೆಳೆಯುತ್ತಾರೆ, ಅವರಿಗೆ ಎಷ್ಟು ನೆಟ್ ಇನ್‌ಕಂ ಇರುತ್ತದೆ ಎಂಬುದೆಲ್ಲಾ ಅಲ್ಲಿನ ಅನೇಕ ಸದಸ್ಯರುಗಳಿಗೆ ಚೆನ್ನಾಗಿ ತಿಳಿದಿರುತ್ತದೆ. ಅದಕ್ಕಾಗಿ ಅವರಿಗೆ ಈ ಕಮಿಷನ್ನಿನ ಸದಸ್ಯರಾಗಲು ಅವಕಾಶವಿರಬೇಕು. ಈ ವಿಚಾರ ಸರ್ಕಾರಕ್ಕೇನೂ ಈಗಲೂ ಮಹಾದೊಡ್ಡ ಪ್ರಶ್ನೆಯಲ್ಲ. ಅದ್ದರಿಂದ ಸರ್ಕಾರದವರು ಇಬ್ಬರು ಮೂವರು ಸದಸ್ಯರನ್ನು ವಿಧಾನಸಭೆಯಿಂದ ಆರಿಸಬೇಕು. ಒಂದು ಸಾರಿ ಶ್ರೀ ಮುಕ್ಕಣ್ಣಪ್ಪನವರು ಇದೇ ಸಭೆಯಲ್ಲಿ ನಿಮ್ಮ ನಿಮ್ಮ ಪಾರ್ಟಿಯವರನ್ನೇ ಕಮಿಟಿಗಳಿಗೆ ಸದಸ್ಯರನ್ನಾಗಿ ಆರಿಸಿಕೊಳ್ಳುತ್ತೀರಿ ಎಂಬುದಾಗಿ ಹೇಳಿದರು. ವಿಧಾನಸಭೆಯಿಂದ ಯಾರನ್ನಾದರೂ ಆರಿಸಿಕೊಂಡು ಈ ಕಮಿಷನ್ನಿಗೆ ಸದಸ್ಯರನ್ನಾಗಿ ಹಾಕುವುದರಲ್ಲಿ ಏನೂ ಆಕ್ಷೇಪಣೆಯಿಲ್ಲ. ಹೈದರಾಬಾದಿನಲ್ಲಿ ಏನು ಮಾಡಿದ್ದಾರೆಂದರೆ ಅಸೆಂಬ್ಲಿಯಿಂದ ಒಬ್ಬರೋ, ಇಬ್ಬರೋ, ಮೂವರೋ ಸದಸ್ಯರನ್ನು ಆರಿಸಿಕೊಂಡಿದ್ದಾರೆ. ಆದ್ದರಿಂದ ಇಲ್ಲಿ ಯಾವ ಯಾವ ಪಕ್ಷದ ಸ್ಟ್ರೆಂಗ್ತ್ ಎಷ್ಟೆಷ್ಟಿದೆಯೋ ಅದರ ಪ್ರಕಾರ ಆರಿಸಿಕೊಳ್ಳಬೇಕು. ಅದೇ ರೀತಿ ಕೌನ್ಸಿಲ್‌ನಲ್ಲಿಯೂ ಮಾಡಬೇಕು. ನಾವೆಲ್ಲರೂ ಕೂಡ ಇಡೀ ದೇಶದ ಪ್ರತಿನಿಧಿಗಳಾಗಿರುವುದರಿಂದ ದೇಶದ ಜನತೆಯ ಪ್ರತಿನಿಧಿಗಳೇ ಅದರಲ್ಲಿ ಇರುತ್ತಾರೆ, ನಮ್ಮ ನಿಮ್ಮ ಜನಗಳನ್ನು ಕಮಿಟಿಗಳಿಗೆ ಹಾಕುತ್ತಾರೆಂದು ಆಕ್ಷೇಪಣೆ ಬರಬಾರದು. ಆದ್ದರಿಂದ ನಾನ್ ಅಫಿಷಿಯಲ್ಸ್ ಬಗ್ಗೆ ಅಸೆಂಬ್ಲಿಯಿಂದ ಇಬ್ಬರು ಅಥವಾ ಮೂವರು ಕೌನ್ಸಿಲ್‌ನಿಂದ ಇಬ್ಬರು ಅಥವಾ ಮೂವರು ಹೀಗೆ ಆರಿಸಿಕೊಂಡು ಮೈಸೂರು ಲ್ಯಾಂಡ್ ಕಮಿಷನ್ನಿನಲ್ಲಿ ಹಾಕಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದರಿಂದ ಆಗುವ ಉದ್ದೇಶವೇನು? What will be the status after they become the members of the commission?

ಶ್ರೀ ವೀರೇಂದ್ರ ಪಾಟೀಲ್.—ಯಾವ ವಿಷಯದಲ್ಲಾದರೂ ರೈತರ ಕುಂದುಕೊರತೆಗಳನ್ನು ಸರ್ಕಾರಕ್ಕೆ ಸೂಚಿಸಲು ಮತ್ತು ತಕ್ಕ ಸಲಹೆಗಳನ್ನು ಕೊಡಲು ಮತ್ತಷ್ಟು ಅನುಕೂಲ ಒದಗುತ್ತದೆ. ಹೈದರಾಬಾದಿನಲ್ಲಿ ನಾನ್ ಅಫೀಷಿಯಲ್ಸ್ ಪೈಕಿ ವಿಧಾನಸಭೆಯ ಸದಸ್ಯರಲ್ಲೊಬ್ಬರು ಲ್ಯಾಂಡ್ ಕಮಿಷನ್ನಿನ ಚೇರ್‌ಮನ್ ಆಗಿದ್ದಾರೆ. ಅಲ್ಲಿನ ಲ್ಯಾಂಡ್ ರಿಫಾರಮ್ಸ್ ಬೋರ್ಡಿನಲ್ಲಿ ಒಬ್ಬ ಸೆಕ್ರೆಟರಿ ಇದ್ದರು. ಅವರು ಅಫಿಷಿಯಲ್ ಅಥವಾ ನಾನ್ ಅಫಿಷಿಯಲ್ಲೋ ತಿಳಿಯಲಿಲ್ಲ. ಹೈಕೋರ್ಟ್ ಜಡ್ಜ್ ಈ ಕಮಿಟಿಯ ಚೇರ್‌ಮನ್ ಎಂದು ಅಲ್ಲಿ ಹೇಳಿದಾಗ ಯಾರೂ ಯಾವುದಕ್ಕೂ ವಿರೋಧ ಹೇಳಿದ ಹಾಗಿಲ್ಲ. ಅದೇ ರೀತಿ ಇಲ್ಲಿಯೂ ಮೈಸೂರು ಲ್ಯಾಂಡ್ ಕಮಿಷನ್ನಿನ ಚೇರ್‌ಮನ್ ಅವರೇ ಇರಲಿ. ಆದರೆ ಇಂತಹ ಒಂದು ದೊಡ್ಡ ಮಹತ್ವವಾದಂಥ ಬಾಡಿಯಲ್ಲಿ ಈ ವಿಧಾನಸಭೆಯ ಮತ್ತು ವಿಧಾನಪರಿಷತ್ತಿನ ಪ್ರತಿನಿಧಿಗಳು ಇರುವುದು ಒಳ್ಳೆಯದು ಎಂಬುದಾಗಿ ನನ್ನ ಭಾವನೆ. ಅದಲ್ಲದೆ ಈಗ ಲ್ಯಾಂಡ್ ಕಮಿಷನ್ ಮೂರು ವರ್ಷಗಳವರೆಗೂ ನಿಲ್ಲಬಹುದು ಎಂದೆನ್ನಿಸಬಹುದು. ಎಲ್ಲಿಯವರೆಗೂ ಲೀಜ್ ಆಫ್ ಲ್ಯಾಂಡ್ ಪ್ರಾಬ್ಲಮ್ಸ್ ಇರುತ್ತದೋ ಅಲ್ಲಿಯ

(ಶ್ರೀ ವೀರೇಂದ್ರ ಪಾಟೀಲ್)

ವರೆಗೂ ಲ್ಯಾಂಡ್ ಕಮಿಷನ್ ಇರಬೇಕು ಎಂದು ಹೇಳು ತ್ತೇನೆ. ಕೆಲವು ಕಡೆ ಈ ಕಮಿಷನ್ನಿಗೆ ಒಂದು ವರ್ಷ, ಎರಡು ವರ್ಷ ಹೀಗೆ ಕಾಲಾವಧಿ ಕೊಡುತ್ತಾರೆ. ಅದ ರೊಳಗೇ ಲೋಕಲ್ ಏರಿಯಾದವರು ಒಂದು ನಿರ್ಣಯ ಮಾಡಿ ಈ ಕಮಿಷನ್ನಿನ ಕಾಲಾವಧಿಯನ್ನು ಹೆಚ್ಚಿಸ ಲಿಕ್ಕೆ ಪರ್ಮಿಟ್‌ಮಾಡಿ ಎಂದು ಹೇಳಬಹುದು. ಆದರೆ ಆ ರೀತಿ ಪರ್ಮಿಟ್ ಮಾಡುವುದು ಇಲ್ಲ ಅವಶ್ಯಕತೆ ಇಲ್ಲ. ಕೊನೆಯದಾಗಿ ಈ ಆಕ್ಟ್ ಇಂಪ್ಲಿಮೆಂಟೇಷನ್ ಯಾರಿಗೆ ವಹಿಸಬೇಕೆಂಬುದು ಒಂದು ದೊಡ್ಡ ಪ್ರಶ್ನೆ. ಈ ಆಕ್ಟನ್ನು ಯಾವ ಉದ್ದೇಶದಿಂದ ಮಾಡಬೇಕೆಂದಿದ್ದೇವೋ ಆ ಉದ್ದೇಶದಿಂದ ಈ ಬಿಲ್ಲನ್ನು ಪಾಸ್ ಮಾಡಿ ಆಕ್ಟ್ ಮಾಡಬೇಕಾಗಿದೆ. ಅದು ಸಫಲವಾಗಬೇಕಾದರೆ ಎಂಟೈರ್ ಆಕ್ಟಿನಲ್ಲಿ ಈ ಭೂಸುಧಾರಣೆ ರಿಫಾರ್ಮ್ಸ್‌ನ್ನು ಪ್ರತ್ಯೇಕ ಅಡ್ಮಿನಿಸ್ಟ್ರೇಷನ್ ಮೆಷಿನರಿ ಕ್ರಿಯೇಟ್ ಮಾಡಬೇಕು. ಇದಕ್ಕಾಗಿ ಸುಮಾರು 27 ಲಕ್ಷ ರೂಪಾಯಿಗಳು ವರ್ಷಕ್ಕೆ ಖರ್ಚಾಗಬಹುದು. ಇದೆಲ್ಲಾ ಮಾಡುವುದಾದರೆ ಸುಮಾರು 25 ಟ್ರಿಬ್ಯೂನಲ್ಸ್ ಬೇಕಾಗುತ್ತದೆ. ಪ್ರತಿಯೊಂದು ಜಿಲ್ಲೆಗೂ ಒಂದು ಟ್ರಿಬ್ಯೂನಲ್‌ನಂತೆ ಆಗಬೇಕು. ಅಸಿಸ್ಟೆಂಟ್ ಕಮಿಷನರ್ ಆ ಟ್ರಿಬ್ಯೂನಲ್ ಛೇರ್‌ಮನ್ ಆಗಿರಬೇಕು. ಸಂಪೂರ್ಣ ಅಧಿಕಾರವೆಲ್ಲಾ ಟ್ರಿಬ್ಯೂನಲ್ಲಿಗೆ ಕೊಟ್ಟಿದ್ದಾರೆ. ಕೆಲವು ಅಧಿಕಾರವನ್ನು ಮಾತ್ರ ಡೆಪ್ಯುಟಿ ಕಮೀಷನರಿಗೆ ಕೊಟ್ಟಿದ್ದಾರೆ. ಇದರಿಂದ ಗ್ರಾಮಗಳಲ್ಲಿ ಉಂಟಾಗತಕ್ಕ ಪ್ರತಿಯೊಂದು ವಾದದ ತೀರ್ಪಿಗೆ ಮತ್ತು ಮಾತು ಮಾತಿಗೆ ಗ್ರಾಮಸ್ಥರು ಜಿಲ್ಲಾ ಕೋರ್ಟಿಗೆ ಹೋಗಬೇಕು. ಈ ರೀತಿ ಪ್ರತಿಯೊಂದು ಸಾರಿ ಅಲ್ಲಿಗೆ ಹೋಗಬೇಕಾದರೆ ರೈತರಿಗೆ ಬಹಳ ಕಷ್ಟ. ಒಂದು ಡಿಸ್ಟ್ರಿಕ್ಟಿಗೆ ಒಂದು ಟ್ರಿಬ್ಯೂನಲ್ ಆದರೆ, ಎಷ್ಟು ದಿವಸ ಗಳು ಕುಳಿತರೂ ಕೆಲಸಮಾಡುವುದಕ್ಕಾಗುವುದಿಲ್ಲ. ಒಂದೊಂದು ವರ್ಷವಾದರೂ ಕೇಸುಗಳು ತೀರ್ಮಾನ ವಾಗಿ ಮುಗಿಯಲಿಕ್ಕಿಲ್ಲ. ಅದಕ್ಕೋಸ್ಕರ ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದು ಮುನ್‌ಸೀಫ್ ಕೋರ್ಟ್ ಇರ ಬೇಕು.

ಒಬ್ಬ ಸದಸ್ಯರು.—ಅದಕ್ಕೆ ಬದಲು ಅಲ್ಲಿ ಒಬ್ಬ ಅಸಿಸ್ಟೆಂಟ್ ಕಮಿಷನರನ್ನು ಇಟ್ಟಿರುತ್ತಾರೆ.

ಶ್ರೀ ವೀರೇಂದ್ರ ಪಾಟೀಲ್.—ಜಿಲ್ಲೆಯಲ್ಲಿ ಒಂದು ಟ್ರಿಬ್ಯೂನಲ್ ಮಾಡಿದ ಮೇಲೆ ರೈತರು ಅಥವಾ ಭೂಮಿಯ ಮಾಲೀಕರು ಪ್ರತಿಯೊಬ್ಬರೂ ಅಲ್ಲಿಗೆ ಹೋಗಿ ಮಾತು ಮಾತಿಗೆ ಟ್ರಿಬ್ಯೂನಲ್ ಹತ್ತಿರ ಬರ ಬೇಕು. ಇದರಿಂದ ಎಷ್ಟು ತೊಂದರೆಯಾಗುತ್ತದೆಂ ಬುದನ್ನು ನೋಡಬೇಕು. ಮುಖ್ಯವಾಗಿ ನಾನು ಹೇಳುವುದೇನೆಂದರೆ, ಈ ಆಕ್ಟ್ in letter and in spirit ಜ್ಯುಡಿಷಿಯರಿ ತೀರ್ಮಾನ ಮಾಡುವಂತಿರಬೇಕು. ದೇಶದಲ್ಲಿ ಆಗ ಎಂತಹ ವಿರೋಧ ಪಕ್ಷವಿದ್ದರೂ ಯಾರೂ ಯಾವ ವಿಷಯದಲ್ಲೂ ವಿರೋಧವಾಗಿ ಮಾತನಾಡು ವುದಿಲ್ಲ. ಹೀಗಿರುವಾಗ ಪ್ರತಿಯೊಂದು ತಾಲ್ಲೂಕಿ ನಲ್ಲೂ ಮುನ್ಸೀಫ್ ಕೋರ್ಟ್ ಇರುವುದಾದರೆ ರೈತ ರಿಗೆ ಕಷ್ಟ ತಪ್ಪುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನೀವು ಕೋರ್ಟಿಗೆ ಹೋಗುವುದನ್ನೇ ಬಿಟ್ಟಿದ್ದೀರಿ.

ಶ್ರೀ ವೀರೇಂದ್ರ ಪಾಟೀಲ್.—ಆದರೆ ಸಿವಿಲ್ ಲಿಟಿ ಗೇಷನ್‌ಗಳು ಕಡಮೆಯಾಗುತ್ತವೆಂದು ನಾನು ಹೇಳ ಬೇಕಾಗಿಲ್ಲ. ಆ ಅಂಶ ಎಲ್ಲರಿಗೂ ಚೆನ್ನಾಗಿ ಗೊತ್ತಿದೆ. ಕೆಲವರು ಮುನ್ಸೀಫ್ ಕೋರ್ಟ್ ವಜಾಮಾಡಿ ಎಂದು ಹೇಳುತ್ತಾರೆ. ಅದು ಸರಿಯಲ್ಲ. ಅಡಿಷನಲ್ ಮುನ್ಸೀಫ್ ಕೋರ್ಟುಗಳನ್ನು ಮಾಡಿ. ಜ್ಯುಡಿಷಿ ಯರಿಯಿಂದ ಲ್ಯಾಂಡ್ ರಿಫಾರಮ್ಸ್ ಜಾರಿಗೆ ಬರುವಂತೆ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ಹೈದರಾಬಾದಿನಲ್ಲಿ ಟ್ರಿಬ್ಯೂನಲ್ಸ್, ಅಪಲೇಟ್ ಟ್ರಿಬ್ಯೂ ನಲ್ಸ್ ಎಂದು ಪ್ರಾರಂಭ ಮಾಡಿದರು. ಆದರೂ ಇನ್ನೂ ಕೆಲಸ ಅಲ್ಲಿ ಸಾಕಷ್ಟು ಆಗಿಲ್ಲ.

ನಮ್ಮ ಕೈಯಲ್ಲಿರುವ ಪವರನ್ನು ಜುಡಿಷಿಯರಿಗೆ ಕೊಟ್ಟಮೇಲೆ ನಮ್ಮ ಕೈಯಲ್ಲಿಲ್ಲ ಎನ್ನುವ ಸೈಕಾಲಜಿ ಇದೆ. ಅಪಲೇಟ್ ಕೋರ್ಟನ್ನು ಜುಡಿಷಿ ಯರಿಗೆ ಒಪ್ಪಿಸುವುದಕ್ಕೆ ತಯಾರಾಗಿದ್ದೇವೆ. ಈ ಲೋಯರ್ ಕೋರ್ಟು, ಎಂದರೆ ಒರಿಜನಲ್ ಕೋರ್ಟೂ ಜುಡಿಷಿಯಲ್ ಕೋರ್ಟು ಇರಲಿ ಎಂದು ಅನ್ನುವಾಗ, ಅದರ ಸದಸ್ಯರು ಒಬ್ಬ ಅಸಿಸ್ಟೆಂಟ್ ಕಮೀಷನರು ಇರಲಿ ಎಂದು ಹೇಳಿದರೆ, ಅದರಲ್ಲಿ ಅರ್ಥವಿಲ್ಲ. ಜುಡಿಷಿಯರಿ ಯನ್ನು ಒಂದು ಸ್ಟೇಜಿನಲ್ಲಿ ರೆಕಗ್‌ನೈಸ್ ಮಾಡಿದ್ದೇವೆ. ತಾಲ್ಲೂಕಿನಲ್ಲಿ ಮುನ್‌ಸೀಫ್ ಮೇಜಿಸ್ಟ್ರೇಟ್ ಕೋರ್ಟಿದೆ. ಅದಕ್ಕೇ ಈ ಟ್ರಿಬ್ಯೂನಲ್ಲಿನ ಕರ್ತವ್ಯಗಳನ್ನು ವಹಿಸು ವುದು ಸರಿ. 2-2, 3-3 ತರಹ ಕೋರ್ಟು ಮಾಡಿ ದ್ದೀರಿ. ಒಂದು ಕಡೆ ಟ್ರಿಬ್ಯೂನಲ್ಲಿಗೆ ಹೋಗಿ ಎನ್ನು ತ್ತೀರಿ, ಇನ್ನೊಂದು ಕಡೆ ಡೆಪ್ಯುಟಿ ಕಮೀಷನರಿಗೆ, ಮತ್ತೊಂದು ಕಡೆ ರೆವಿನ್ಯೂ ಟ್ರಿಬ್ಯೂನಲ್ಲಿಗೆ ಹೋಗಿ ಎನ್ನುತ್ತೀರಿ. ಅಪಲೇಟ್ ಅಥಾರಿಟಿಗೆ ಹೋಗಿ ಎನ್ನುತ್ತೀರಿ. ಅದು ಬೇಡ. ಒರಿಜನಲ್ ಕೋರ್ಟು ಸಿವಿಲ್ ಕೋರ್ಟು ಇರಲಿ, ಅಪಲೇಟ್ ಅಥಾರಿಟಿ ಡಿಸ್ಟ್ರಿಕ್ಟ್ ಕೋರ್ಟಿರಲಿ ಡಿವಿಜನಲ್ ಪವರ್ಸ್ ಹೈಕೋರ್ಟಿಗಿರಲಿ. ಇಂಪ್ಲಿಮೆಂಟೇಷನ್ ಸಲುವಾಗಿ ವಿಚಾರ ಮಾಡಿದರೆ ಹೀಗೆ ಮಾಡುವುದು ಒಳ್ಳೆಯದು. ಈಗ ಒಂದೊಂದು ಜಿಲ್ಲೆಗೆ ಒಂದ ರಂತೆ 25 ಟ್ರಿಬ್ಯೂನಲ್ ಮಾಡಬೇಕೆಂದಿದೆ. ಅದು ಸರಿ ಹೋಗಲಿಲ್ಲ, ಒಂದೊಂದು ಸಬ್ ಡಿವಿಜನ್ನಿಗೆ ಒಂದೊಂದು ಮಾಡೋಣವೆಂದು ಮತ್ತೊಮ್ಮೆ ಹೇಳುವ ಅವಕಾಶ ಬೇಡ. ಇಷ್ಟೆಲ್ಲಾ ಮಾಡುವುದಕ್ಕೆ ಬದಲಾಗಿ, ಈ ಟ್ರಿಬ್ಯೂನಲ್ ಕರ್ತವ್ಯಗಳನ್ನು ಜುಡಿಷಿ ಯರಿಗೇ ಒಪ್ಪಿಸುವುದು ಬಹಳ ಯೋಗ್ಯವಿದೆ, ಈ ಸಲಹೆಯನ್ನು ವಿಚಾರ ಮಾಡಿನೋಡಿ. ನಾನು ಸರ ಕಾರಕ್ಕೆ ಒತ್ತಿ, ಒತ್ತಿ ಹೇಳುವುದೇನೆಂದರೆ ಈ ಅಧಿಕಾರ ವನ್ನು ಜುಡಿಷಿಯರಿಗೆ ಒಪ್ಪಿಸದೆ ಹೋದರೆ, ಯಾವ ಉದ್ದೇಶದಿಂದ ಈ ಆಕ್ಟನ್ನು ಮಾಡುತ್ತಿದ್ದಾರೋ ಆ ಉದ್ದೇಶ ಸಫಲವಾಗದೆ, ಮಾಲೀಕರ ಟೆನೆಂಟುಗಳ ಜನ್ಮ ಲಿಟಿಗೇಷನ್ನಿನಲ್ಲೇ ಹೋಗುತ್ತದೆ; ಏಕೆಂದರೆ ಅವರಿಗೆ ಸ್ವಲ್ಪ ಕಾಲದಲ್ಲಿ ನ್ಯಾಯಸಿಗುವುದಿಲ್ಲ. ಸರ ಕಾರಕ್ಕೆ ಮತ್ತೊಮ್ಮೆ ಒತ್ತಿ ಹೇಳುವುದೇನೆಂದರೆ ಈ ಟ್ರಿಬ್ಯೂನಲ್‌ನ್ನು ನಿಷ್ಪಕ್ಷಪಾತದಿಂದ ಜುಡಿಷಿಯರಿಗೆ ಒಪ್ಪಿಸುವಂತೆ ನಿರ್ಣಯ ಮಾಡಿ ಎಂದು.

ಈ ಉತ್ತಮವಾದ ಪ್ರೋಗ್ರೆಸಿವ್ ಲೆಜಿಸ್ಲೇಷನ್ ತಂದುದಕ್ಕಾಗಿ ಸರ್ಕಾರಕ್ಕೂ ಮತ್ತು ವಿಶೇಷವಾಗಿ ಮಾನ್ಯ ಕಂದಾಯ ಮಂತ್ರಿಗಳಿಗೂ ಅಭಿನಂದನೆಗ ಳನ್ನು ಕೊಟ್ಟು ನನ್ನ ನಾಲ್ಕು ಮಾತುಗಳನ್ನು ಮುಗಿ ಸುತ್ತೇನೆ.

6-30 P.M.

Sri K. DOOMAPPA (Surathkal).—Mr. Speaker, since a long time there has been a demand for such a legislation and especially after independence there were persistent demands It is also found that some of the States in the South

introdced some sort of legislation. Some of them were progressive and others were not so progressive. After the Reorganisation of States, fragments of five different states have come to Mysore and in order to prepare a comprehensive legislation, it took a long time and now after three years, the Hon'ble the Revenue Minister has placed it before this House. I welcome the measure because it is comprehensive and it consists of many progressive provisions though there are some defective provisions also which require to be amended by this Houes and by the Select Committee.

There are objections and criticisms from several members that the Bill is not sufficiently progressive. Sri Sreenivasa Setty, the Hon'ble Leader of the Opposition, said that it was a fraud. I beg to differ from him. It is only a draft Bill; and when there are so many intelligent members vigilantly watching and scrutinising, it is not possible for any Minister to commit fraud on such a House and there is a Select Committee which will go into it minutely. I believe, the Select Committee and this House will make the legislation perfect. The Revenue Minister himself has admitted that it is not a perfect piece of legislation and it requires several modifications.

Sir, it has also been said by some members that the Bill does not abolish landlordism and that the tiller has not been made the owner. I may remind the House that we are in a democratic Republic and are bound by the Constitution; and so we cannot by one stroke of the pen abolish landlordism or confiscate private property. We have to go slowly. It is evolution that we have accepted as our principle of progress and not revolution. So, the Bill need necessarily to be conservative and has to take note of the conflicting interests and of the existence of several parties.

Before coming to the provisions of the Bill, I would like to give a personal explanation lest I should be misunderstood and mistaken for an agent of the landlords.

Sri C. M. ARUMUGHAM.—We will not mistake you !

Sri K. DOOMAPPA.—You will probably when I speak on the provisions of the Bill. Therefore I say that I am a member of a Tenant Farmer's family. I was actively engaged in agriculture when I was a student and after 30 years of Government service, I again took to active agriculture and so I may be expected to have some practical experience and ideas about agriculture. I do not know the conditions in other Districts of this State because I have not travelled over that area. But I know the conditions in my district, that is the district of South Kanara. In that district, most of the lands are in the hands of the tenants and a majority of the holdings are probaly below the basic holdings. Now according to this Bill, the landlord can resume the lands below the basic holding from the hands of a tenant who is not a protected tenant. It will be extremely difficult for a poor, illiterate tenant to prove without records that he was on the land for 12 years. He might have been there for a 100 years, but without records it would not be easy to prove that he was there even for 12 years. So, the provisions of the Bill will entail the dispossession of a very large number of poor tenants who will have to move from their homes because most of them would have built their homes on the plot itself. This House can very well imagine the result if a very large number of poor tenants are ousted if and when the provisions of this Bill are implemented. It will be really a disastrous condition if even one per cent of the existing tenants are ousted from their holdings. We have got over 62,000 holdings which are less than 5 acres. I think, these are below the basic holdings and are likely to be resumed if the resumption power is retained, as it is, in the Bill. We have got 12,334 holdings exceeding 5 acres but not exceeding 10 acres and the area is 88,673 acres. These may conveniently be presumed to be above the basic holdings. According to the Jatti Report, the largest proportion of tenant cultivators, that is 65·86 per cent, is in South Kanara. So, if the resumption clause is retained as it is and made applicable to South Kanara,

(SRI K. DOOMAPPA)

thousands of the tenants will be evicted and they will not have even an inch of land, and large scale unemployment will be the result. In order to avoid this, I would suggest, as has already been suggested by Sri Ghorpade, that the resumption clause may be kept in abeyance so far as South Kanara is concerned.

SRI C. M. ARUMUGHAM.—Sir, why some of the Hon'ble Ministers are sitting in the back benches, I want to know. Seats are reserved for them and they cannot go and sit anywhere they like. (*Laughter*).

MR. DEPUTY SPEAKER.—There is nothing wrong.

SRI C. M. ARUMUGHAM.—Are not the Ministers prohibited from sitting here and there as they like ?

MR. DEPUTY SPEAKER.—No.

SRI K. DOOMAPPA.—The landlord has also the right to resume land when he is cultivating a basic holding and the tenant is holding above basic holding. He can resume half of that holding. So, the holdings would be split and thus become uneconomical.

SRI KADIDAL MANJAPPA.—Supposing we make a provision that if the small holder wants to resume for personal cultivation, he should leave half to the tenant.

SRI K. DOOMAPPA.—It would be further dividing and it would be a very uneconomical holding. It would probably lead to decrease in food production also. It would be useless for both of them.

SRI KADIDAL MANJAPPA.—I have got some novel suggestions and I will throw them before the House at the proper time.

SRI K. DOOMAPPA.—I therefore suggest that the resumption clause may be kept in abeyance at least for a period of five years so that there might be some adjustments both on the part of the landlord and the tenant.

SRI Y. VEERAPPA.—The resumption process is the main issue of the Bill; you are cutting the mother-root itself.

MR. DEPUTY SPEAKER.—Can the Hon'ble Member complete his speech before we rise ?

SRI C. M. ARUMUGHAM.—Mr. Speaker, the Hon'ble Member Sri Doomappa is speaking for the first time; let him continue tomorrow. (*Laughter*).

SRI K. DOOMAPPA.—I was saying about keeping the clause of resumption in abeyance. But, this is on the condition that the clause regarding fixation of fair rent and fixity of tenure should be applied, *i.e.* fair rent with regard to wet and garden lands in South Kanara. In wet lands there are three classes. The rate of rent of first class and second class Nanja may be 25 per cent of the yield and of Bettn, *i.e.*, 3rd class Nanja, the rate of rent may be 20 per cent. The produce of the third crop should be excluded and also the straw. Bagayat or garden other than arecanut garden 20 per cent and for arecanut garden 25 per cent. If the existing rate is less than the fair rent proposed as above, the existing rent is to prevail.

Then the tenant should not be evicted from his holding if he pays the rent regularly without any default. If he defaults for a period of two years, the landlord may apply for resumption. On these conditions I request the Hon'ble the Revenue Minister to make a special provision in the Bill in regard to South Kanara.

The Bill does not abolish landlordism, because under certain clauses exemptions are given. "There the landlord is a minor or a widow or a person subject to any mental or physical disability or serving as a member of the armed forces......" lands should not be taken away from them. So also the small land holder may create a tenancy or lease the land. A proviso may therefore be added under this clause permitting leases and keeping the resumption clause in abeyance in so far as it affects the people of South Kanara.

Ceiling may be fixed on an acreage basis, and not, as suggested in the Bill, on the basis of income. As regards compensation, if the landlords voluntarily desire to surrender the land to the Government, the compensation to be awarded may be 20 times the fair rent fixed under the Act, or the market

value whichever is less. As regards the payment of compensation, if it is over ten thousand rupees, Rs. 10,000 may be paid in cash and the balance in ten equal instalments with a reasonable rate of interest. In this connection I suggest that the compensation over and above 15 times the rent if allowed under this Act may be borne by the Government, as the Government has in many sectors paid subsidies, but the agricultural sector has not had enough of assistance in this way.

[MR. SPEAKER in the Chair]

Regarding tribunals, I suggest that disputes may go to civil courts and not to tribunals. Because in some of the courts of the tribunals, the poor tenants may not be able to get justice. Lawyers also may be permitted to appear before such courts.

The religious and charitable institutions may also be allowed to own the lands they have on the condition that they should allow the existing tenants to continue on the lands and also on the condition that they give them for cultivation on fair rent as suggested in this Bill, and also give them fixity of tenure. I suggest this because there are many institutions in South Kanara which depend mainly on the income of such lands. Five per cent bonds that the managers of the religious institutions are proposed to be given will not be sufficient to meet the expenses in many of the institutions. I have myself been a trustee in one of the temples and I know that every year for performing viniyogas and daily poojas, we had to go about begging to the tune of five or six thousand rupees. The institution has got a small property fetching a rent of forty muras of rice. When the provisions of this Bill are applied, it will be reduced to 15 or 20 muras of rice. With this decrease in income, it may be necessary to find the money found to be short for the annual requirements, and again people will have to be troubled for contributions. Of course in such institutions that contingency will always arise. There are other institutions with enough of land and income at present to maintain themselves.

7 P.M.

So I would suggest in the interests of smooth implementation of this Act, for a period of five years, the resumption clause as well as the clause relating to religious institutions may be kept in abeyance in its application to South Kanara. South Kanara is a very densely populated district and there is lot of pressure on land. There is a large population of landless labourers and they have to be looked after with greater care. Since the land will not able to support them, it is suggested that avenues of other employments, *i.e.*, industrial employment may be found for them. The economic position of agriculturists is worse in this district than that of industrial labourers. The organised industrial labourers have been able to extract greater wages and their standard of living is higher and better than that of cultivators who are eking out a precarious existence on land.

With these words I close my speech.

MR. SPEAKER.—Sri C. M. Arumugham will have a chance to speak tomorrow.

Before we rise I would like to bring to the notice of the Hon'ble Members certain factors. In all 23 members have spoken out of which 12 belong to Congress and 11 from the Opposition side, 4 are from P.S.P. and 7 are Independents. Almost this session seems to be that of Independents! The time taken is: Congress 8 hours 35 minutes, P.S.P. 5 hours 30 minutes and Independents 7 hours.

The House will now rise and meet tomorrow at 8-30 A.M.

The House adjourned at Five Minutes past Seven of the Clock to meet again at Thirty Minutes past Eight of the Clock on Friday, the 7th August 1959.